2. ಚುನಾವಣಾ ಲೆಕ್ಕಪತ್ರಗಳನ್ನಿಡುವ ನಿಯಮಗಳಂತೆ ಅಭ್ಯರ್ಥಿಯು ಅಂತಹ ಖರ್ಚು ವೆಚ್ಚದ ಲೆಕ್ಕಪತ್ರಗಳ ನಿರ್ವಹಣೆಯನ್ನು ಮಾಡುವುದನ್ನು ಹಾಗೂ ಸಲ್ಲಿಸುವುದನ್ನು ಪಾಲಿಸುವಂತೆ ಅಗತ್ಯಗೊಳಿಸುವುದಕ್ಕಾಗಿ ಅವನು ನಾಮನಿರ್ದೇಶನ ಪತ್ರ ನೀಡಿದ ಕೂಡಲೇ ಪ್ರತಿಯೊಬ್ಬ ಅಭ್ಯರ್ಥಿಗೆ ಪತ್ರದ ಮೂಲಕ ಲಿಖಿತವಾಗಿ ತಿಳಿಸತಕ್ಕದ್ದು.

3. ಅಭ್ಯರ್ಥಿಯು ದೈನಂದಿನ ಚುನಾವಣೆ ಖರ್ಚುವೆಚ್ಚಗಳನ್ನು ಹಾಗೂ ಈ ಕೆಳಗಿನ ಸಂಸ್ಥೆ/ಪಕ್ಷ/ವ್ಯಕ್ತಿಗಳಿಂದ ಅಥವಾ ಅವರ ನಿರ್ದೇಶನದ ಮೇರೆಗೆ ಚುನಾವಣೆ ಸಂಬಂಧ ಮಾಡಿದ ಖರ್ಚು ವೆಚ್ಚಗಳನ್ನು ಅಭ್ಯರ್ಥಿಗಳಿಗೆ ನೀಡಲಾದ ನಮೂನೆಯ ರಿಜಿಸ್ಟರುಗಳಲ್ಲಿ ನಿರ್ವಹಿಸತಕ್ಕದ್ದು.

    1. ಅಭ್ಯರ್ಥಿಯನ್ನು ನಿಲ್ಲಿಸಿದ ರಾಜಕೀಯ ಪಕ್ಷಗಳಿಂದ ಮತ್ತು
    2. ಅಭ್ಯರ್ಥಿಯನ್ನು ಬೆಂಬಲಿಸುವ ಇತರ ಯಾವುದೇ ರಾಜಕೀಯ ಪಕ್ಷ ಮತ್ತು
    3. ಅಭ್ಯರ್ಥಿಯನ್ನು ಬೆಂಬಲಿಸುವ ಯಾವುದೇ ಇತರೇಸಂಸ್ಥೆ/ಸಂಘಟನೆಗಳು/ಸಮಿತಿಗಳು ಮತ್ತು
    4. ಅಭ್ಯರ್ಥಿಯನ್ನು ಬೆಂಬಲಿಸುವ ಯಾವುದೇ ಇತರ ವ್ಯಕ್ತಿ.

4. ಕಲಂ 26 ಎ(2)ರ ಉದ್ದೇಶಗಳಿಗಾಗಿ ಒಂದು ರಾಜಕೀಯ ಪಕ್ಷವು ಆ ಪಕ್ಷದ

    ನಾಯಕರುಗಳೆಂದು ತನ್ನ ಪಕ್ಷದ ಸದಸ್ಯರನ್ನು ಮಾತ್ರ ನಾಮನಿರ್ದೇಶನ ಮಾಡಬಹುದು.

5. ಅಭ್ಯರ್ಥಿಯು ತನ್ನ ನಾಮನಿರ್ದೇಶನ ಪತ್ರವನ್ನು ಸಲ್ಲಿಸಿದ ನಂತರ ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಗೆ ಅಥವಾ ಅವನ ಚುನಾವಣಾ ಏಜೆಂಟ್‌ನಿಗೆ ನಿಯಮಗಳಲ್ಲಿ ನಮೂದಿಸಿದ ಮಾದರಿಯ ನಮೂನೆಗಳನ್ನು ಹೊಂದಿರುವ ರಿಜಿಸ್ಟರನ್ನು ಸೂಕ್ತ ಸ್ವೀಕೃತಿಯನ್ನು ಪಡೆದು ನೀಡತಕ್ಕದ್ದು. ಅಂತಹ ಪ್ರತಿಯೊಂದು ರಿಜಿಸ್ಟರು ಸಹ ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಸಂಖ್ಯೆಯೊಂದಿಗೆ ಅಧಿಕೃತಗೊಂಡಿರತಕ್ಕದ್ದು. ಅಭ್ಯರ್ಥಿಯು ತನ್ನ ದೈನಂದಿನ ಚುನಾವಣಾ ಖರ್ಚು ವೆಚ್ಚಗಳನ್ನು ಈ

ರಿಜಿಸ್ಟರ್‌ನಲ್ಲಿ ದಾಖಲಿಸಬೇಕೆ ಹೊರತು ಬೇರೆ ಯಾವುದೇ ಇತರ ರೀತಿಯಲ್ಲಿ ದಾಖಲಿಸತಕ್ಕದ್ದಲ್ಲ. ಅವನ ಲೆಕ್ಕಪತ್ರಗಳ ದಾಖಲೆ ಹೊಂದಿರುವ ಈ ರಿಜಿಸ್ಟರನ್ನು ಚುನಾವಣೆಯ ಫಲಿತಾಂಶ ಘೋಷಿಸಿದ 30 ದಿನಗಳೊಳಗಾಗಿ ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸತಕ್ಕದ್ದು. ಈ ರಿಜಿಸ್ಟರಿನಲ್ಲಿರುವ ದೈನಂದಿನ ಲೆಕ್ಕವು ಕೊನೆಗೆ ನಿಗದಿತ ನಮೂನೆಯಲ್ಲಿ ತಯಾರಿಸಿದ ಲೆಕ್ಕದ ಘೋಷಣೆಯನ್ನು ಹೊಂದಿರತಕ್ಕದ್ದು.

6. ಅಭ್ಯರ್ಥಿಯಿಂದ ಸಲ್ಲಿಸಲಾದ ಲೆಕ್ಕಪತ್ರದ ದಾಖಲೆಗಳು ನಿಗದಿತ ನಮೂನೆಯಲ್ಲಿ ಅಭ್ಯರ್ಥಿಯಿಂದ ಮಾಡಲ್ಪಟ್ಟ ಅಫಿಡವಿಟ್‌ನ್ನು ಜೊತೆಗೊಂಡಿರಬೇಕು.
7. ನಾಮಪತ್ರ ಸಲ್ಲಿಸಿದ ನಂತರ ರಿಜಿಸ್ಟರು ಹಾಗೂ ಚುನಾವಣಾ ವೆಚ್ಚದ ಘೋಷ್ವಾರೆ ಪಟ್ಟಿಗೆ ಸಂಬಂಧಿಸಿದ (ಭಾಗ–I ರಿಂದ VI ರವರೆಗಿನ ಮಾದರಿ ನಮೂನೆ) ಹಾಗೂ ಅಫಿಡವಿಟ್ ಮತ್ತು ಕಂಡಿಕೆ 44.1(2) ರಲ್ಲಿ ವಿವರಿಸಿದ ಪತ್ರವನ್ನು ಅಭ್ಯರ್ಥಿಗೆ ನೀಡತಕ್ಕದ್ದು.
8. ಅಂತಹ ಪತ್ರ ಹಾಗೂ ಮೇಲ್ಕಾಣಿಸಿದ ರಿಜಿಸ್ಟರು ನಮೂನೆಗಳನ್ನು ಅಭ್ಯರ್ಥಿಗೆ ನೀಡಿದ ನಂತರ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ನೀಡುವಂತೆ ಅಭ್ಯರ್ಥಿಯನ್ನು ಕೋರತಕ್ಕದ್ದು. ಸ್ವೀಕೃತಿ ಪತ್ರವನ್ನು ಪಡೆಯತಕ್ಕದ್ದು ಹಾಗೂ ದಾಖಲೆಗಾಗಿ ಸಂಗ್ರಹಿಸಿಡತಕ್ಕದ್ದು.
9. ಕಲಂ 26ಎ ರನ್ವಯ ಅಭ್ಯರ್ಥಿಯು ಚುನಾವಣಾ ಖರ್ಚುವೆಚ್ಚದ ಲೆಕ್ಕಪತ್ರವನ್ನಿಡಬೇಕು ಹಾಗೂ ಕಲಂ 26ಬಿ ಪ್ರಕಾರ ಕೇವಲ ಅಭ್ಯರ್ಥಿಗಳು ಮಾತ್ರ ಅಂತಹ ಲೆಕ್ಕಪತ್ರವನ್ನು ಒಪ್ಪಿಸಲು ಭಾದ್ಯಸ್ಥರಾಗಿರುತ್ತಾರೆ.

**44.2 ಲೆಕ್ಕಪತ್ರ ಸ್ವೀಕರಿಸಬಹುದಾದ ಅಧಿಕಾರಿಗಳು**

1. ನಿಯಮಗಳಲ್ಲಿರುವ ಅವಕಾಶಗಳಂತೆ ಸಂಬಂಧಿಸಿದ ವಾರ್ಡುಗಳ ರಿಟರ್ನಿಂಗ್ ಅಧಿಕಾರಿಗಳಾಗಲಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಾಗಲಿ ಅಂತಹ ಲೆಕ್ಕಪತ್ರವನ್ನು ಸ್ವೀಕರಿಸಲು ಹಾಗೂ ದಾಖಲಿಸಿ ಸಂಗ್ರಹಿಸಿಡಲು ಅಧಿಕಾರ ಹೊಂದಿದವರಾಗಿರುತ್ತಾರೆ.
2. ಸ್ಪರ್ಧಿಸುವ ಅಭ್ಯರ್ಥಿಗಳ ಅನುಕೂಲತೆಯ ದೃಷ್ಟಿಯಿಂದ ರಿಟರ್ನಿಂಗ್ ಅಧಿಕಾರಿಯು ಫಲಿತಾಂಶ ಘೋಷಿಸಿದ ಮೂರು ದಿನಗಳೊಳಗೆ ಸ್ಪರ್ಧಿಸಿದ ಎಲ್ಲ ಅಭ್ಯರ್ಥಿಗಳಿಗೆ ಲೆಕ್ಕಪತ್ರವನ್ನು ನಿಯಮಗಳಡಿ ನಿಗದಿಪಡಿಸಿದ ನಮೂನೆಗಳಲ್ಲಿ ಸಲ್ಲಿಸುವಂತೆ ಹಾಗೂ ಅಂತಹ ಲೆಕ್ಕಪತ್ರ ಸಲ್ಲಿಸಲು ಇರುವ ಕೊನೆಯ ದಿನವನ್ನು ತಿಳಿಸಿ ಎಲ್ಲ ಅಭ್ಯರ್ಥಿಗಳಿಗೆ ಪತ್ರವನ್ನು ಬರೆಯತಕ್ಕದ್ದು.
3. ಒಂದು ವೇಳೆ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ವಾರ್ಡುಗಳಲ್ಲಿ ಸ್ಪರ್ಧಿಸಿದಲ್ಲಿ ಅವನು ಸ್ಪರ್ಧಿಸುವ ಬೇರೆ ಬೇರೆ ವಾರ್ಡುಗಳ ಬಗ್ಗೆ ಪ್ರತ್ಯೇಕ ಪ್ರತ್ಯೇಕವಾಗಿ ಚುನಾವಣೆ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸತಕ್ಕದ್ದು.

**44.3 ಲೆಕ್ಕಪತ್ರವು ಈ ಕೆಳಗಿನ ವಿವರಗಳನ್ನು ಹೊಂದಿರತಕ್ಕದ್ದು**

a)ವೆಚ್ಚವನ್ನು ಮಾಡಿದ ದಿನಾಂಕ

b)ಖರ್ಚು ವೆಚ್ಚದ ನಮೂನೆ (ಉದಾ: ಪ್ರಯಾಣದ, ಅಂಚೆ ಸ್ಟ್ಯಾಂಪುಗಳ ಬಗ್ಗೆ, ಮುದ್ರಣ ಬಾಬ್ತು ಇತ್ಯಾದಿ)

c)ಖರ್ಚುವೆಚ್ಚದ ರಖಂ (i) ಸಂದಾಯ ಮಾಡಿದ ಹಣ (ii) ಬಾಕಿ ಇರುವ ಹಣ.

d)ಪಾವತಿ ಮಾಡಿದ ದಿನಾಂಕ

e)ಹಣ ಸ್ವೀಕರಿಸಿದವರ ಹೆಸರು, ವಿಳಾಸ

f)ಹಣಪಾವತಿ ಮಾಡಿದ್ದಲ್ಲಿ ಪಾವತಿಯ ಅನುಕ್ರಮಸಂಖ್ಯೆ.

g)ಪಾವತಿಸಲು ಬಾಕಿ ಇದ್ದಲ್ಲಿ ಬಿಲ್ಲಿನ ಕ್ರಮಸಂಖ್ಯೆ

h)ಪಾವತಿಸಲು ಬಾಕಿ ಇರುವ ವ್ಯಕ್ತಿಯ ಹೆಸರು, ವಿಳಾಸ.

2. ಹಣವನ್ನು ಎಲ್ಲಿ ಪಾವತಿಸಿದೆ ಎಂಬ ಬಗ್ಗೆ ದಾಖಲೆ/ಬಿಲ್ಲು/ವೋಚರುಗಳನ್ನು/ಸ್ವೀಕೃತಿಗಳನ್ನು ಖರ್ಚುವೆಚ್ಚ ಮಾಡಿದ ಬಗ್ಗೆ ಪೂರಕ ದಾಖಲೆಯನ್ನು ಪಡೆದುಕೊಂಡು ಕ್ರಮಾನುಗತವಾಗಿ ಇಟ್ಟಿರತಕ್ಕದ್ದು ಹಾಗೂ ದೈನಂದಿನ ಲೆಕ್ಕಪತ್ರದ ರಿಜಿಸ್ಟರಿನಲ್ಲಿ ದಾಖಲಿಸತಕ್ಕದ್ದು.

**44.4 ಲೆಕ್ಕಪತ್ರಗಳ ಪರಿಶೀಲನೆ**

1. ಲೆಕ್ಕಪತ್ರಗಳನ್ನು ಕಾಲಕಾಲಕ್ಕೆ ಪರಿಶೀಲನೆ ಮಾಡಲು ವಿಚಕ್ಷಣೆ ಮಾಡಲು ನುರಿತ ಸಂಬಂಧಪಟ್ಟ ಇಲಾಖೆಯ ಸಿಬ್ಬಂದಿಗಳನ್ನು ಈ ಕೆಲಸಕ್ಕೆ ನಿಗದಿಪಡಿಸಿದ ಅಧಿಕಾರಿಗಳೆಂದು ನೇಮಿಸಬಹುದು. ಚುನಾವಣಾ ವೀಕ್ಷಕರು ಹಾಗೂ ನೀವೂ ಕೂಡ ಅಭ್ಯರ್ಥಿಗಳ ಲೆಕ್ಕಪತ್ರಗಳನ್ನು ಕಾಲಕಾಲಕ್ಕೆ ಪರಿಶೀಲಿಸಬೇಕು.

2. ಅಭ್ಯರ್ಥಿಯ ಪರವಾಗಿ ನಡೆಯುವ ಪಕ್ಷದ ಪ್ರಮುಖರ /ನಾಯಕರ/ಸಭೆ ಸಮಾರಂಭಗಳಿಗೆ ಭದ್ರತಾ ದೃಷ್ಟಿಯಿಂದ ಸರಕಾರದ ಏಜೆನ್ಸಿಗಳು ಅಂತಹ ಪಕ್ಷದ ಪರವಾಗಿ ಮಾಡುವ ಬ್ಯಾರಿಕೇಡ್, ವೇದಿಕೆ ಇತ್ಯಾದಿಗಳ ಬಗ್ಗೆ ಉಂಟಾಗುವ ಖರ್ಚುವೆಚ್ಚಗಳನ್ನು ಅಭ್ಯರ್ಥಿಯ ಖರ್ಚು ವೆಚ್ಚಗಳೆಂದು ಪರಿಗಣಿಸಬೇಕು. ಇಂತಹ ಸಂದರ್ಭಗಳಲ್ಲಿ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳ ಪರವಾಗಿ ಸಂಯುಕ್ತವಾಗಿ ಮಾಡಿದರೆ ಅಂತಹ ವೆಚ್ಚವನ್ನು ಪ್ರತಿಯೊಬ್ಬ ಅಭ್ಯರ್ಥಿಗೂ ಸಮಾನವಾಗಿ ಭಾಗ ಮಾಡಿ ಪರಿಗಣಿಸುವುದು.

**44.5 ಲೆಕ್ಕಪತ್ರ ಸಲ್ಲಿಸುವ ಕ್ರಮ**

1. ಪ್ರತಿಯೊಬ್ಬ ಅಭ್ಯರ್ಥಿಯು ಚುನಾವಣಾಧಿಕಾರಿಯು ನೀಡಿದ ರಿಜಿಸ್ಟರಿನಲ್ಲಿ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಬರೆದು ದಾಖಲಿಸಿದ ನಂತರ ಅವುಗಳನ್ನು ಫಲಿತಾಂಶ ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗೆ ಚುನಾವಣಾಧಿಕಾರಿಗೆ ಸ್ವತ: ಸಲ್ಲಿಸತಕ್ಕದ್ದು.

2. ನಂತರ ಭಾಗ-I ರಿಂದ VI ರಲ್ಲಿ ಘೋಷ್ವಾರೆಯ ಪಟ್ಟಿಯನ್ನು ತಯಾರಿಸಿ ರಿಜಿಸ್ಟರ್ ಜೊತೆಗೆ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು. ಇವುಗಳಲ್ಲಿರುವ ಯಾವುದೇ ಕಾಲಂಗಳನ್ನು ಖಾಲಿ ಬಿಡತಕ್ಕದ್ದಲ್ಲ. ಯಾವುದೇ ಕಾಲಂನಲ್ಲಿ ಕಾಣಿಸಬೇಕಿರುವ ವೆಚ್ಚ ಇಲ್ಲವಾದರೆ 'NIL' ಎಂದು ಬರೆಯತಕ್ಕದ್ದು.

3. ನಿಗದಿತ ನಮೂನೆಯಲ್ಲಿ ಲೆಕ್ಕಪತ್ರ ಸಲ್ಲಿಸುವಾಗ ಅವುಗಳ ಜೊತೆಗೆ ಮಾದರಿ ನಮೂನೆಯಲ್ಲಿ ಕಾಣಿಸಿದಂತೆ ಅಫಿಡವಿಟ್ ಮೂಲಕ ಪ್ರಮಾಣವನ್ನು ಮಾಡುವುದರ ಮೂಲಕ ತನ್ನ ಲೆಕ್ಕಪತ್ರಗಳಿಗೆ ಸಮರ್ಥನೆಯನ್ನು ಸಲ್ಲಿಸತಕ್ಕದ್ದು.

4. ಅಭ್ಯರ್ಥಿಯಿಂದ ಸಲ್ಲಿಸಲಾದ ಲೆಕ್ಕಪತ್ರವು ನಿಜವಾದದ್ದು ಹಾಗೂ ಪೂರ್ಣವಾದದ್ದೆಂದು ಅಭ್ಯರ್ಥಿಯ ಘೋಷ್ವಾರೆಯ ಕೊನೆಗೆ ದೃಢೀಕರಿಸಿ ಸಹಿಯನ್ನು ಮಾಡತಕ್ಕದ್ದು.

**5. ಲೆಕ್ಕಪತ್ರದ ಜೊತೆಗೆ ವೋಚರುಗಳನ್ನು ಸಲ್ಲಿಸುವುದು:**

ಅಂಚೆಚೀಟಿ, ರೈಲು ಪ್ರಯಾಣದ ಟಿಕೇಟು ಇತ್ಯಾದಿ ಸ್ವರೂಪದ ಪಾವತಿ/ವೋಚರ್ ಪಡೆಯಲು ಅಸಾಧ್ಯವಿರುವಂತಹ ಖರ್ಚುವೆಚ್ಚಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸ್ವರೂಪದ ಪ್ರತಿಯೊಂದು ಖರ್ಚು ವೆಚ್ಚಗಳ ಬಗಗೆ ಪಾವತಿ/ವೋಚರನ್ನು ಪಡೆದು ಲೆಕ್ಕಪತ್ರಗಳ ಜೊತೆಗೆ ಸಲ್ಲಿಸತಕ್ಕದ್ದು.

**6. ಪಾವತಿ /ವೋಚರುಗಳನ್ನು ಸಹಿಮಾಡುವುದು:**

ಪ್ರತಿಯೊಂದು ಖರ್ಚುವೆಚ್ಚ ಸಮರ್ಥಿಸುವ ವೋಚರುಗಳು ಅಭ್ಯರ್ಥಿಯಿಂದಾಗಲಿ ಅಥವಾ ಅವನ ಚುನಾವಣಾ ಏಜೆಂಟ್‌ನಿಂದಾಗಲೀ ಪೂರ್ಣ ಸಹಿಯನ್ನು ಹೊಂದಿರತಕ್ಕದ್ದು.

**44.6 ಲೆಕ್ಕಪತ್ರ ಸಲ್ಲಿಸಲು ಕೊನೆಯ ದಿನ**

ಕಲಂ 26ಬಿ ಯನ್ವಯ ಲೆಕ್ಕಪತ್ರವನ್ನು ಚುನಾವಣೆಯ ದಿನ ಅಂದರೆ ಚುನಾವಣೆಯ ಫಲಿತಾಂಶ ಘೋಷಿಸಿದ ದಿನಾಂಕದಿಂದ 30 ದಿನಗಳಲ್ಲಿ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು ಮತ್ತು 30ನೇ ದಿನವು ಸರ್ಕಾರಿ ರಜೆ ಅಥವಾ ರವಿವಾರವಾಗಿದ್ದಲ್ಲಿ ಅದರ ಮರುದಿನ ಕಛೇರಿಯು ಪ್ರಾರಂಭವಾದಂದು ಸಲ್ಲಿಸತಕ್ಕದ್ದು.

**44.7 ಚುನಾವಣೆ ದಿನ**

ಚುನಾವಣೆ ದಿನವೆಂದರೆ ನೀವು ಅಭ್ಯರ್ಥಿಯು ನಿರ್ವಾಚಿತನಾಗಿದ್ದಾನೆಂದು ಘೋಷಿಸಿದ ದಿನ ಅಂದರೆ ಅವಿರೋಧವಾಗಿ ಆಯ್ಕೆಯಾಗಿರಲಿ ಅಥವಾ ಮತದಾನದ ಮೂಲಕ ಆಯ್ಕೆಯಾಗಿರಲಿ.

**44.8 ಲೆಕ್ಕಪತ್ರ ಸ್ವೀಕರಿಸಿದ ಬಗ್ಗೆ ಸಂಕೇತವಾಗಿ ಸ್ವೀಕೃತಿ ಇಡುವುದು**

ಅಭ್ಯರ್ಥಿಯು ಲೆಕ್ಕಪತ್ರ ಸಲ್ಲಿಸಿದ ನಂತರ ನೀವು ಸ್ವೀಕೃತಿಯಾಗಿ ನಮೂನೆ 11 ಸಿ ಯಲ್ಲಿ ಸ್ವೀಕೃತಿಯನ್ನು ಇಡತಕ್ಕದ್ದು ಹಾಗೂ ಲೆಕ್ಕಪತ್ರವನ್ನು ಅಂಚೆಯ ಮೂಲಕ ರವಾನಿಸಿದಲ್ಲಿ ನೀವೂ ಕೂಡಾ ಸ್ವೀಕೃತಿಯನ್ನು ಅಂಚೆ ಮೂಲಕ ಕಳಿಸತಕ್ಕದ್ದು ಹಾಗೂ ಅಂತಹ ಸ್ವೀಕೃತಿಯ ಒಂದು ಪ್ರತಿಯನ್ನು ಲೆಕ್ಕಪತ್ರದ ಜೊತೆಗೆ ಇಡತಕ್ಕದ್ದು.

**44.9 ಲೆಕ್ಕಪತ್ರ ಸಲ್ಲಿಸುವುದು**

ಅಭ್ಯರ್ಥಿಯಿಂದ ಲೆಕ್ಕಪತ್ರ ಸ್ವೀಕರಿಸಿದ ಎರಡು ದಿನಗಳೊಳಗೆ ನೀವು ನಿಮ್ಮ ಕಛೇರಿಯ ನೋಟೀಸು ಬೋರ್ಡಿನ ಮೇಲೆ ಈ ಕೆಳಗಿನ ವಿವರಗಳನ್ನು ಹೊಂದಿದ ತಿಳುವಳಿಕೆ ಪತ್ರವನ್ನು ಅಂಟಿಸಿ ಪ್ರಕಟಿಸಬೇಕು.

I. ಲೆಕ್ಕಪತ್ರ ಸಲ್ಲಿಸಿದ ದಿನಾಂಕ

II. ಅಭ್ಯರ್ಥಿಯ ಹೆಸರು

III. ಲೆಕ್ಕಪತ್ರವನ್ನು ಪರಿಶೀಲಿಸಲು ಇರುವ ಸಮಯ ಮತ್ತು ಸ್ಥಳ

**44.10 ಪರಿಶೀಲನೆ ಮತ್ತು ನಕಲು ಪ್ರತಿಗಳು**

ಲೆಕ್ಕಪತ್ರವನ್ನು ಪರಿಶೀಲಿಸ ಬಯಸುವ ಪ್ರತಿಯೊಬ್ಬ ವ್ಯಕ್ತಿಯು ರೂ.10/- ಶುಲ್ಕವನ್ನು ಸಲ್ಲಿಸಿ ಪರಿಶೀಲಿಸಬಹುದು. ಪ್ರತಿಯೊಂದು ಪುಟಕ್ಕೆ ಅಥವಾ ಅದರ ಭಾಗಗಳಿಗೆ ರೂ.1/- ರಂತೆ ಶುಲ್ಕ ಪಡೆದು ದೃಢೀಕೃತ ನಕಲು ಪ್ರತಿಯನ್ನು ಪೂರೈಸಬಹುದು.

**44.11 ಆಯೋಗಕ್ಕೆ ವರದಿ ನೀಡುವುದು**

**1.** ನಿಯಮ 22 ಡಿ ರನ್ವಯ ಲೆಕ್ಕಪತ್ರ ಸಲ್ಲಿಸಲು ಇರುವ ಕೊನೆಯ ದಿನದ ಮುಕ್ತಾಯದ ತರುವಾಯ ಹಾಗೂ ಅದರ ನಂತರ 7ನೆಯ ದಿನ ಮೀರುವ ಮೊದಲು ಚುನಾವಣಾಧಿಕಾರಿಯು ಆಯೋಗಕ್ಕೆ ಈ ಕೆಳಗಿನ ಮಾಹಿತಿಗಳನ್ನೊಳಗೊಂಡಂತೆ ಒಂದು ವರದಿಯನ್ನು ನೀಡತಕ್ಕದ್ದು.

1. ಸ್ಪರ್ಧಿಸುವ ಅಭ್ಯರ್ಥಿಗಳ ಯಾದಿಯಲ್ಲಿರುವ ಅಭ್ಯರ್ಥಿಯ ಹೆಸರು.
2. ನಿರ್ದೇಶನ ಹಾಗೂ ನಿಯಮಗಳನ್ವಯ ಲೆಕ್ಕಪತ್ರ ಸಲ್ಲಿಸಲು ವಿಫಲನಾದ ಪ್ರತಿಯೊಂದು ಅಭ್ಯರ್ಥಿಯ ಹೆಸರು.
3. ಅಭ್ಯರ್ಥಿಯು ಲೆಕ್ಕಪತ್ರವನ್ನು ನಿಯಮಗಳಂತೆ ಸಕಾಲದಲ್ಲಿ ಸಲ್ಲಿಸಿದ್ದಾನೆಯೇ? ಮತ್ತು ಕಾಲ ಕಾಲಕ್ಕೆ ಚುನಾವಣೆ ಪ್ರಕ್ರಿಯೆಯ ಅವಧಿಯಲ್ಲಿ ಪರಿಶೀಲನೆಗೆ ಸಲ್ಲಿಸಿದ್ದಾನೆಯೇ? ಮತ್ತು ಸಲ್ಲಿಸದೇ ಇದ್ದಲ್ಲಿ ಆಯೋಗದ ನಿರ್ದೇಶನ ಪಾಲನೆ ಮಾಡದೆ ಇದ್ದ ಬಗ್ಗೆ ನೋಟೀಸು ನೀಡಲಾಗಿದೆಯೇ? ಮತ್ತು ಮುಂದಿನ ಅನುಸರಣೆ ಯಾವುದಾದರೂ ಮಾಡಿದೆಯೇ?
4. ನಿಮ್ಮ ಅಭಿಪ್ರಾಯದಂತೆ ಲೆಕ್ಕಪತ್ರವನ್ನು ನಿಯಮಗಳಂತೆ ಸಕಾಲದಲ್ಲಿ ಸಲ್ಲಿಸಿದ್ದಾರೆಂಬ ಬಗ್ಗೆ ವರದಿ.

**2.** ಚುನಾವಣಾಧಿಕಾರಿಯು ಆಯೋಗಕ್ಕೆ ವರದಿ ಸಲ್ಲಿಸುವ ಅವಧಿಯೊಳಗೆ ಲೆಕ್ಕಪತ್ರ ಸಲ್ಲಿಸಲು ವಿಫಲನಾದ ಅಭ್ಯರ್ಥಿಯ ಹೆಸರನ್ನು ಅಂತಹ ವರದಿಯಲ್ಲಿ ಸೇರಿಸಿ ಲೆಕ್ಕಪತ್ರ ಸಲ್ಲಿಸಿಲ್ಲವೆಂಬ ಷರಾದೊಂದಿಗೆ ಕಳುಹಿಸತಕ್ಕದ್ದು.

**3.** ಯಾವುದೇ ಅಭ್ಯರ್ಥಿಯು ಸಲ್ಲಿಸಿದ ಲೆಕ್ಕಪತ್ರವು ನಿಯಮ ಹಾಗೂ ನಿರ್ದೇಶನಗಳನ್ವಯ ಸರಿಯಿಲ್ಲವೆಂದು ಚುನಾವಣಾಧಿಕಾರಿಯು ವರದಿ ಮಾಡಿದಾಗ ಅವನು ತನ್ನ ವರದಿಯ ಜೊತೆಗೆ ದಾಖಲೆಗಳನ್ನು ಲಗತ್ತಿಸತಕ್ಕದ್ದಲ್ಲ. ಅವರ ವರದಿಯು ಲೆಕ್ಕಪತ್ರಗಳಲ್ಲಿ ಅವನು ಕಂಡು ಹಿಡಿದ ಅಸಮಂಜಸವಾದ ಹಾಗೂ ಆ ಬಗ್ಗೆ ಅವನಿಂದ ಮಾಡಲಾದ ಮೌಲ್ಯ ನಿರ್ಧರಣೆ ಹಾಗೂ ಮುಚ್ಚಿಡಲ್ಪಟ್ಟ ಲೆಕ್ಕಪತ್ರಗಳ ಬಗ್ಗೆ ವಿವರ ಹೊಂದಿರತಕ್ಕದ್ದು.

**4.** ಅಂತಹ ವರದಿಯನ್ನು ಅಂತಿಮವಾಗಿ ಸಲ್ಲಿಸುವಾಗ ಚುನಾವಣಾ ವೀಕ್ಷಕರು, ಇತರ ಅಭ್ಯರ್ಥಿಗಳು ಗಮನಿಸಿ ನೀಡಿದ ಅಭಿಪ್ರಾಯ, ಯಾವುದಾದರೂ ಸಂಸ್ಥೆಗಳು ಹಾಗೂ ಜನಸಾಮಾನ್ಯರು ನೀಡಿದ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**5.** ಆಯೋಗವು ನಿರ್ದೇಶಿಸಿದ ಹೊರತು ನಿಯಮಗಳಡಿ ಲೆಕ್ಕಪತ್ರವನ್ನು ಸಕಾಲದಲ್ಲಿ ಸರಿಯಾಗಿ ನೀಡಿದ ಅಭ್ಯರ್ಥಿ ಲೆಕ್ಕಪತ್ರವನ್ನು ಆಯೋಗಕ್ಕೆ ಕಳುಹಿಸತಕ್ಕದ್ದಲ್ಲ.

**44.12 ಪ್ರತಿಯೊಂದು ವಾರ್ಡಿಗೆ ಬೇರೆ ಬೇರೆ ಲೆಕ್ಕಪತ್ರಗಳು:**

ಪ್ರತಿಯೊಂದು ವಾರ್ಡಿಗೆ ಬೇರೆ ಬೇರೆ ವರದಿಯನ್ನು ಕಳಿಸಿರಿ ಅಂತಹ ಪ್ರತಿಯೊಂದು ವರದಿಯು ಆ ವಾರ್ಡಿನ ಎಲ್ಲ ಸ್ಪರ್ಧಿಸಿದ ಅಭ್ಯರ್ಥಿಗಳು, ಅವರು ಆಯ್ಕೆಯಾಗಿರಲಿ ಅಥವಾ ಸೋತಿರಲಿ ಅವರ ಹೆಸರನ್ನೊಳಗೊಂಡಿರತಕ್ಕದ್ದು.

**44.13 ವಿಳಂಬವಾಗಿ ಸಲ್ಲಿಸಿದ ಲೆಕ್ಕಪತ್ರಗಳು:**

ನೀವು ಆಯೋಗಕ್ಕೆ ವರದಿ ಕಳುಹಿಸಿದ ನಂತರ ಯಾವುದೇ ಒಬ್ಬ ಸ್ಪರ್ಧಿಸಿದ ಅಭ್ಯರ್ಥಿಯು ವಿಳಂಬವಾಗಿ ಲೆಕ್ಕಪತ್ರ ಸಲ್ಲಿಸಿದಲ್ಲಿ ನೀವು ಮೇಲ್ಕಾಣಿಸಿದ ಅದೇ ನಮೂನೆಗಳಲ್ಲಿ ಅವನ ಬಗ್ಗೆ ಪೂರಕ ವರದಿಯನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು. ಅಂತಹ ಲೆಕ್ಕಪತ್ರಗಳನ್ನು ನೀವು ಕೂಲಂಕುಷವಾಗಿ ಪರಿಶೀಲಿಸಿ ಯಾವುದೇ ದೋಷ/ನ್ಯೂನತೆಗಳನ್ನು ಷರಾ ಕಾಲಂ 7 ರಲ್ಲಿ ದಾಖಲಿಸತಕ್ಕದ್ದು.

**44.14 ಪರಿಶೀಲನೆಯ ಸ್ವರೂಪ:**

ಅಭ್ಯರ್ಥಿಯು ಸಲ್ಲಿಸಿದ ಚುನಾವಣಾ ಖರ್ಚುವೆಚ್ಚಗಳ ದಾಖಲೆಗಳನ್ನು, ಅವನು ಸಲ್ಲಿಸಿದ ಖರ್ಚಿನ ಬಗ್ಗೆ ಸರಿಯಾದ ಮತ್ತು ಎಲ್ಲ ಅಂಶಗಳನ್ನು ಪ್ರತಿಫಲಿಸುವ ಕಾರಣ ಅದನ್ನು ಒಪ್ಪುವ ಮೊದಲು ನೀವು ನಿಮಗೆ ಸರಿಕಂಡಂತೆ ಪರಿಶೀಲಿಸಿ ಪರೀಕ್ಷೆ, ವಿಚಾರಣೆ ನಡೆಸತಕ್ಕದ್ದು ಹಾಗೂ ಲೆಕ್ಕಪತ್ರಗಳು ನಿಯಮಗಳನ್ವಯ ಹಾಗೂ ಆಯೋಗ ನೀಡಿದ ನಿರ್ದೇಶನಗಳನ್ವಯ ಸರಿಯಾಗಿದೆಯೇ ಎಂದು ದೃಢೀಕರಿಸಬೇಕು.

**44.15 ವರದಿಯನ್ನು ಪ್ರಕಟಿಸುವುದು**

ಆಯೋಗಕ್ಕೆ ಕಳುಹಿಸಿದ ಪ್ರತಿಯೊಂದು ವರದಿಯ ಇನ್ನೊಂದು ಪ್ರತಿಯನ್ನು ನಿಮ್ಮ ಕಛೇರಿಯ ನೋಟೀಸು ಫಲಕದ ಮೇಲೆ ಪ್ರದರ್ಶಿಸಿರಿ.

**44.16 ವರದಿಯ ಮೇಲೆ ಆಯೋಗದ ತೀರ್ಮಾನ**

ಆಯೋಗವು ವರದಿಯನ್ನು ಪರಿಶೀಲಿಸುವುದು ಮತ್ತು ಯಾವುದೇ ಸ್ಪರ್ಧಿಸಿದ ಅಭ್ಯರ್ಥಿಯು ಲೆಕ್ಕಪತ್ರವನ್ನು ಸಕಾಲದಲ್ಲಿ ಕಾನೂನಿನಂತೆ ನಿಗದಿಪಡಿಸಿದ ಅವಧಿಯಲ್ಲಿ ಸಲ್ಲಿಸಲು ವಿಫಲನಾಗಿದ್ದಾನೆಂದು ತೀರ್ಮಾನಿಸುವುದು. ಅಂತಹ ಪ್ರಕರಣಗಳಲ್ಲಿ ಆಯೋಗವು ಅಂತಹ ಅಭ್ಯರ್ಥಿಯನ್ನು ಯಾಕೆ ಅನರ್ಹನೆಂದು ಘೋಷಿಸಬಾರದು ಎನ್ನುವ ಬಗ್ಗೆ ಕಾರಣ ನೀಡುವಂತೆ ಕೇಳಿ ನೋಟೀಸು ನೀಡುವುದು.

**44.17 ಆಯೋಗದ ನೋಟೀಸನ್ನು ಅಭ್ಯರ್ಥಿಗೆ ಜಾರಿಗೊಳಿಸುವುದು**

**1.** ಲೆಕ್ಕಪತ್ರ ಸಲ್ಲಿಸಲು ವಿಫಲನಾದ ಅಭ್ಯರ್ಥಿಗೆ ಆಯೋಗವು ನೀಡಿದ ಅಂತಹ ನೋಟೀಸನ್ನು ವಿಳಂಬವಿಲ್ಲದೇ ಜಾರಿಯಾಗುವ ಉದ್ದೇಶಕ್ಕಾಗಿ ಹಾಗೂ ಅವರ ಪ್ರಕರಣದ ವಿಚಾರಣೆ ಸಾಧ್ಯವಿದ್ದಷ್ಟು ಬೇಗನೆ ತೀರ್ಮಾನವಾಗುವ ದೃಷ್ಟಿಯಿಂದ ಜಾರಿಗಾಗಿ ಅದನ್ನು ಸಂಬಂಧಿಸಿದ ತಹಶೀಲ್ದಾರರಿಗೆ ಕಳುಹಿಸಲಾಗುವುದು.

**2.** ನೋಟೀಸನ್ನು ಅಭ್ಯರ್ಥಿಯು ಸ್ವೀಕರಿಸಿದ ಬಗ್ಗೆ ಸೂಕ್ತ ಸ್ವೀಕೃತಿ ಪಡೆಯುವ ಮೂಲಕ ಜಾರಿಗೊಳಿಸತಕ್ಕದ್ದು.

**3.** ಅಭ್ಯರ್ಥಿಯು ಅವರ ವಿಳಾಸದಲ್ಲಿ ಜಾರಿಗೆ ಸಿಗದಿದ್ದಾಗ ಹಾಗೂ ಅವನ ಕುಟುಂಬದ ಸದಸ್ಯರು ಆ ನೋಟೀಸನ್ನು ಸ್ವೀಕರಿಸಲು ತಿರಸ್ಕರಿಸಿದಾಗ ಅದನ್ನು ಸ್ಥಳೀಯ ಎರಡು ಸಾಕ್ಷಿಗಳ ಸಮಕ್ಷಮ ಅವರ ಮನೆಯ ಗೋಡೆಗೆ ಅಂಟಿಸುವ ಮೂಲಕ ಜಾರಿಗೊಳಿಸಬೇಕು ಹಾಗೂ ಆ ಬಗ್ಗೆ ಸ್ಥಳದಲ್ಲಿರುವ ಅಂತಹ ಸಾಕ್ಷಿಗಳ ಸಹಿ ಹಾಗೂ ಪೂರ್ಣ ವಿಳಾಸ ಹೊಂದಿರುವ ಒಂದು ಪಂಚನಾಮೆಯನ್ನು ತಯಾರಿಸಿ ದಾಖಲೆಗಾಗಿ ಇಟ್ಟುಕೊಳ್ಳತಕ್ಕದ್ದು.

**44.18 ವಿಫಲ ಅಭ್ಯರ್ಥಿಯಿಂದ ಪ್ರತಿನಿಧಿಸುವಿಕೆ:**

ಅಂತಹ ಕಾರಣ ಕೇಳುವ ನೋಟೀಸನ್ನು ಆಯೋಗದಿಂದ ಜಾರಿ ಮಾಡಲ್ಪಟ್ಟ ಸ್ಪರ್ಧಿಸುವ ಅಭ್ಯರ್ಥಿಯು ನೋಟೀಸು ತಲುಪಿದ 20 ದಿನಗಳೊಳಗೆ ಆಯೋಗದಲ್ಲಿ ಲಿಖಿತ ಮನವಿಯೊಂದಿಗೆ ಹಾಜರಿರತಕ್ಕದ್ದು ಹಾಗೂ ಇದೇ ಸಮಯದಲ್ಲಿ ಅವನು ಈಗಾಗಲೇ ಲೆಕ್ಕಪತ್ರ ಸಲ್ಲಿಸದಿದ್ದಲ್ಲಿ ಅಂತಹ ಲಿಖಿತ ಮನವಿಯ ಒಂದು ಪ್ರತಿಯೊಂದಿಗೆ ತನ್ನ ಚುನಾವಣಾ ವೆಚ್ಚಗಳ ಪೂರ್ಣ ಲೆಕ್ಕಪತ್ರವನ್ನು ನಿಮಗೆ ಸಲ್ಲಿಸತಕ್ಕದ್ದು.

**44.19 ಚುನಾವಣಾಧಿಕಾರಿಯ ಪೂರಕ ವರದಿ:**

**1.** ಆಯೋಗದಿಂದ ನೋಟೀಸು ಸ್ವೀಕರಿಸಿದ ಹಾಗೂ ಲೆಕ್ಕಪತ್ರವನ್ನು ನಂತರ ಸಲ್ಲಿಸಿದ ಅಂತಹ ಅಭ್ಯರ್ಥಿಯ ಲೆಕ್ಕಪತ್ರವನ್ನು ಸೂಕ್ತ ಸ್ವೀಕೃತಿ ಪತ್ರದೊಂದಿಗೆ ಚುನಾವಣಾಧಿಕಾರಿಯು ಆಯೋಗಕ್ಕೆ ತನ್ನ ಪೂರಕ ವರದಿಯೊಂದಿಗೆ ಕೂಡಲೆ ರವಾನಿಸತಕ್ಕದ್ದು ಮತ್ತು ಯಾವುದೇ ಪರಿಸ್ಥಿತಿಯಲ್ಲಿ ಆಯೋಗವು ಲೆಕ್ಕಪತ್ರ ಒಪ್ಪಿಸಲು ಅಭ್ಯರ್ಥಿಗೆ ನೀಡಿದ ಅವಧಿಯ ಕೊನೆಯ ದಿನದಿಂದ ಒಂದು ವಾರದೊಳಗೆ ಅಂತಹ ವರದಿಯನ್ನು ಆಯೋಗಕ್ಕೆ ಒಪ್ಪಿಸತಕ್ಕದ್ದು.

**2.** ಅಭ್ಯರ್ಥಿಯು ಲೆಕ್ಕಪತ್ರ ಸಲ್ಲಿಸದೇ ಇದ್ದಾಗ್ಯೂ ಕೂಡ ಚುನಾವಣಾಧಿಕಾರಿಯು ಪೂರಕ ವರದಿಯನ್ನು ಸಲ್ಲಿಸತಕ್ಕದ್ದು.

**44.20 ಆಯೋಗದ ಅಂತಿಮ ಆದೇಶ:**

ಅಭ್ಯರ್ಥಿಯ ಲಿಖಿತ ಮನವಿ/ಹೇಳಿಕೆಯನ್ನು ಹಾಗೂ ಚುನಾವಣಾಧಿಕಾರಿಯ ವಿಮರ್ಶಾ ಟಿಪ್ಪಣಿಯನ್ನು ಪರಿಶೀಲಿಸಿ ಹಾಗೂ ಸೂಕ್ತವಾದ ಅಂತಹ ವಿಚಾರಣೆಯ ತರುವಾಯ ಅಭ್ಯರ್ಥಿಯು ಕಾನೂನಿನಲ್ಲಿ ವಿವರಿಸಿದ ರೀತಿಯಲ್ಲಿ ಸಕಾಲದಲ್ಲಿ ಲೆಕ್ಕಪತ್ರ ಸಲ್ಲಿಸಲು ವಿಫಲನಾದ ಬಗ್ಗೆ ಸಾಕಷ್ಟು ಸಮರ್ಪಕ ಅಥವಾ ನ್ಯಾಯ ಸಮ್ಮತವಾದ ಕಾರಣಗಳಿಲ್ಲವೆಂದು ಆಯೋಗವು ತೃಪ್ತಿ ಹೊಂದಿದ ತರುವಾಯ ನಿಯಮ 43 ಸಿ ಯಡಿ ಅವನು ಆಯೋಗದ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅನರ್ಹನಾಗಿದ್ದಾನೆಂದು ಆಯೋಗವು ಪ್ರಕಟ ಮಾಡುವುದು ಮತ್ತು ಇಂತಹ ಆದೇಶವನ್ನು ಸರ್ಕಾರಿ ಗೆಜೆಟ್‌ನಲ್ಲಿ ಪ್ರಕಟಿಸಲಾಗುವುದು.

**44.21 ಅನರ್ಹತೆಯನ್ನು ತೆಗೆದುಹಾಕುವುದು:**

ಆಯೋಗವು ತಾನು ದಾಖಲಿಸಿದ ಕಾರಣಗಳಿಗಾಗಿ ಅಂತಹ ಅನರ್ಹತೆಯ ಆದೇಶವನ್ನು ತೆಗೆದು ಹಾಕಬಹುದು ಅಥವಾ ಅವಧಿಯನ್ನು ಕಡಿತಗೊಳಿಸಬಹುದಾಗಿದೆ.

**44.22 ಕಾಲಮಿತಿಯನ್ನು ಕಡ್ಡಾಯವಾಗಿ ಪಾಲಿಸುವುದು:**

ಮೇಲ್ಕಂಡ ಕಂಡಿಕೆಗಳಲ್ಲಿ ಆಯೋಗಕ್ಕೆ ಕಳಿಸಬೇಕಾದ ವರದಿಯನ್ನು ಸಲ್ಲಿಸಲು ಬೇರೆ ಬೇರೆ ಕಾಲ ಮಿತಿಯನ್ನು ಹಾಕಲಾಗಿದ್ದು, ವಿಫಲ ಅಭ್ಯರ್ಥಿಗೆ ನೋಟೀಸು ಜಾರಿ ಬಗ್ಗೆ ಅವರ ಲಿಖಿತ ಹೇಳಿಕೆಯನ್ನು ನಿಮ್ಮ ಅಭಿಪ್ರಾಯದೊಂದಿಗೆ ಕಳುಹಿಸುವ ಬಗ್ಗೆ ಇತ್ಯಾದಿ ಬಗ್ಗೆ ಇರುವ ಕಾಲಮಿತಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ತಪ್ಪಿದಲ್ಲಿ ಆಯೋಗವು ಅಂತಹವರ ಮೇಲೆ ಗಂಭೀರ ಕ್ರಮವನ್ನು ಕೈಗೊಳ್ಳುವುದು.

## 45) ಚುನಾವಣಾ ವೀಕ್ಷಕರು ಮಾಡಬೇಕಾದ್ದು ಮತ್ತು ಮಾಡಬಾರದವುಗಳು (Dos and Don'ts)

### (ಎ) ಮಾಡಬೇಕಾದವುಗಳು (Dos)

1) ಆಯೋಗವು ನಿಗದಿಪಡಿಸಿರುವ ಸಂಕ್ಷಿಪ್ತ ಮತ್ತು ವಿವರವಾದ ಸಮಾವೇಶಗಳಲ್ಲಿ ಭಾಗವಹಿಸುವುದು.

2) ತಮ್ಮ ವೈಯಕ್ತಿಕ ವಿವರಗಳನ್ನು ಭರ್ತಿ ಮಾಡುವಾಗ ಸರಿಯಾದ ಮನೆ ವಿಳಾಸ ಮತ್ತು ದೂರವಾಣಿ/ ಫ್ಯಾಕ್ಸ್ ಸಂಖ್ಯೆಗಳನ್ನು ನಮೂದಿಸಿ ಮತ್ತು ಯಾವುದಾದರೂ ಬದಲಾವಣೆ ಇದ್ದಲ್ಲಿ ಕಾಲಕಾಲಕ್ಕೆ ಬದಲಾವಣೆಗಳನ್ನು ತಿಳಿಸತಕ್ಕದ್ದು.

3) ತಮ್ಮ ಪ್ರವಾಸ ಕಾರ್ಯಕ್ರಮಗಳನ್ನು ಸಾಕಷ್ಟು ಮುಂಚಿತವಾಗಿ ತಯಾರಿಸಿಕೊಂಡು ಅದನ್ನು ಆಯೋಗಕ್ಕೆ, ಜಿಲ್ಲಾ ಚುನಾವಣಾಧಿಕಾರಿಗಳಿಗೆ ಮತ್ತು ಸಂಬಂಧಿಸಿದ ವಾರ್ಡಿನ ಚುನಾವಣಾಧಿಕಾರಿಗಳಿಗೆ ತಿಳಿಸತಕ್ಕದ್ದು.

4) ಆಯೋಗವು ನಿಗದಿಪಡಿಸಿರುವಂತೆ ಎಚ್ಚರಿಕೆಯಿಂದ ನೀಡಬೇಕಾದ ಭೇಟಿಗಳು, ಭೇಟಿ ನೀಡಬೇಕಾದ ಅವಧಿ ಮತ್ತು ಸಮಯಗಳನ್ನು ತಿಳಿದುಕೊಂಡು ಅದರಂತೆ ಕರ್ತವ್ಯ ನಿರ್ವಹಿಸುವುದು.

5) ಹಂಚಿಕೆ ಮಾಡಲಾದ ವಾರ್ಡುಗಳ ವ್ಯಾಪ್ತಿಯಲ್ಲಿ ತಮ್ಮ ಪ್ರವಾಸ ಕಾರ್ಯಕ್ರಮವನ್ನು ಪ್ರಚುರಪಡಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.

6) ಹೆಚ್ಚಿನ ಗಮನಹರಿಸಬೇಕಾದ ಸ್ಥಳ ಮತ್ತು ಮತಗಟ್ಟೆಗಳನ್ನು ಮೊದಲೇ ಗುರುತಿಸತಕ್ಕದ್ದು.

7) ಸಾಕಷ್ಟು ಸಂಖ್ಯೆಯಲ್ಲಿ ಮತಗಟ್ಟೆ ಸಾಮಗ್ರಿಗಳು ದಾಸ್ತಾನು ಮಾಡಿಕೊಂಡು ಲಭ್ಯವಿರುವ ಬಗ್ಗೆ ಪರಿಶೀಲಿಸತಕ್ಕದ್ದು.

8) ಸ್ವಸಾಮರ್ಥ್ಯದಿಂದ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ಸಾಮಾನ್ಯವಾಗಿ ನಿರ್ಧರಿಸತಕ್ಕದ್ದು.

9) ಮತಗಟ್ಟೆಗಳಿಗೆ ತಮ್ಮ ಇಚ್ಛಾನುಸಾರ ಭೇಟಿ ನೀಡಿ ಅವುಗಳನ್ನು ಪರಿಶೀಲಿಸತಕ್ಕದ್ದು.

10) ಮಾದರಿ ನೀತಿ ಸಂಹಿತೆ ಉಲ್ಲಂಘನೆ, ವರ್ಗಾವಣೆಯ ಮೇಲೆ ನಿಷೇಧ ಇತ್ಯಾದಿಗಳ ಬಗ್ಗೆ ನಿಗಾವಹಿಸತಕ್ಕದ್ದು.

11) ಇ.ವಿ.ಎಂ.ಗಳ ಬಳಕೆ ಬಗ್ಗೆ ತಾವು ಪರಿಣತಿಯನ್ನು ಪಡೆದುಕೊಳ್ಳಬೇಕು ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸತಕ್ಕದ್ದು.

12) ಇ.ವಿ.ಎಂ.ಗಳ ಬಳಕೆ ಬಗ್ಗೆ ಮಾಧ್ಯಮದವರಿಗೆ ಮತ್ತು ಸಾರ್ವಜನಿಕರಿಗೆ ತಪ್ಪು ತಿಳುವಳಿಕೆ ಬಾರದಂತೆ ಸಾಕಷ್ಟು ಪ್ರಚಾರ ಕಾರ್ಯಕ್ರಮವನ್ನು ಮಾಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.

13) ಕೇಂದ್ರ ಪಡೆಗಳನ್ನು ನಿಯೋಜನೆ ಮಾಡಿದ್ದಲ್ಲಿ ಪರಿಣಾಮಕಾರಿಯಾಗಿರುವ ಬಗ್ಗೆ ನಿಗಾವಹಿಸತಕ್ಕದ್ದು.

14) ವಾರ್ಡುಗಳಿಗೆ ಭೇಟಿ ನೀಡಿ ಕೇಂದ್ರಸ್ಥಾನಕ್ಕೆ ವಾಪಸ್ಸು ಬಂದ ನಂತರ 24 ಗಂಟೆಗಳ ಒಳಗಾಗಿ ತಮ್ಮ ವರದಿಯನ್ನು ಆಯೋಗಕ್ಕೆ ಕಳುಹಿಸತಕ್ಕದ್ದು. ಅದರೊಂದಿಗೆ ಕಾಲಕಾಲಕ್ಕೆ ನಿರ್ಣಯಿಸಿ ಕಳುಹಿಸಬೇಕಾದ ವರದಿಗಳನ್ನು ಕಳುಹಿಸತಕ್ಕದ್ದು.

15) ಮುಖ್ಯವಾದ ಮತ್ತು ತಕ್ಷಣ ಪರಿಹರಿಸಬೇಕಾದ ವಿಷಯಗಳು ಮತ್ತು ಇತರೆ ವಿಷಯಗಳನ್ನು ಆಯೋಗದ ಗಮನಕ್ಕಾಗಲಿ ಅಥವಾ ಚುನಾವಣಾಧಿಕಾರಿಗಳ ಗಮನಕ್ಕಾಗಲೀ ತರಬೇಕಾದಲ್ಲಿ ಅದನ್ನು ವಿಳಂಬಕ್ಕೆ ಅವಕಾಶ ನೀಡದೇ, ಅಂತಹ ವಿಷಯಗಳನ್ನು ಸಾಮಾನ್ಯವಾಗಿ ಕಳುಹಿಸುವ ವರದಿಯೊಂದಿಗೆ ಕಳುಹಿಸದೆ ತುರ್ತಾಗಿ ಕಳುಹಿಸತಕ್ಕದ್ದು.

16) ವರದಿಗಳನ್ನು ರಹಸ್ಯವಾಗಿ ಮುಚ್ಚಿದ ಕವರ್‌ಗಳಲ್ಲಿ ಆಯೋಗಕ್ಕೆ ಕಳುಹಿಸತಕ್ಕದ್ದು.

17) ಜಿಲ್ಲಾ ಚುನಾವಣಾಧಿಕಾರಿ/ ಚುನಾವಣಾಧಿಕಾರಿಗಳು ಕರೆಯುವ ರಾಜಕೀಯ ಪಕ್ಷಗಳ ಸಭೆಗಳಲ್ಲಿ ಭಾಗವಹಿಸತಕ್ಕದ್ದು.

18) ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು ಮತ್ತು ಇತರೆ ಯಾವುದೇ ಅಭ್ಯರ್ಥಿಗಳು ಮಾಡುವ ವೆಚ್ಚದ ಬಗ್ಗೆ ಸ್ವಸಾಮರ್ಥ್ಯದಿಂದ ಸ್ವತಂತ್ರವಾಗಿ ನಿರ್ಧರಿಸತಕ್ಕದ್ದು.

19) ಭಿತ್ತಿಪತ್ರಗಳು, ಕರಪತ್ರಗಳು ಇತ್ಯಾದಿಗಳ ಬಗ್ಗೆ ಸ್ಥಳೀಯ ಜನರೊಂದಿಗೆ ಮಾತನಾಡಿ ಸ್ವತಂತ್ರವಾಗಿ ನಿರ್ಧರಿಸತಕ್ಕದ್ದು.

20) ಆಯೋಗವು ನಿಗದಿಪಡಿಸಿರುವ ಚುನಾವಣಾ ವೆಚ್ಚದ ಲೆಕ್ಕಪತ್ರದ ದಾಖಲಾತಿಗಳನ್ನು (ರಿಜಿಸ್ಟರನ್ನು) ಪರಿಶೀಲಿಸತಕ್ಕದ್ದು.

21) ಕೇಂದ್ರಸ್ಥಾನವನ್ನು ಬಿಡುವ ಮುನ್ನ ಆಯೋಗದ ಅನುಮತಿಯನ್ನು ಪಡೆಯತಕ್ಕದ್ದು.

22) ಚುನಾವಣಾ ವೀಕ್ಷಕರು ತಮಗೆ ವಹಿಸಲಾದ ಕರ್ತವ್ಯಗಳನ್ನು ಸೂಕ್ಷ್ಮವಾಗಿ ಮತ್ತು ಅತ್ಯಂತ ಪರಿಣಾಮಕಾರಿಯಾಗಿ ಆಯೋಗವು ನಿರ್ದೇಶಿಸಿದಂತೆ ನಿಗಾವಹಿಸಿ ನಿರ್ವಹಿಸತಕ್ಕದ್ದು.

**ಮಾಡಬಾರದವುಗಳು (Don’ts)**

1) ವೀಕ್ಷಕರು ಆಯೋಗವು ಆಯೋಜಿಸುವ, ಚುನಾವಣೆ ಮಾಹಿತಿ ನೀಡುವ ಸಂಕ್ಷಿಪ್ತ ಸಭೆಗಳಲ್ಲಿ ಭಾಗವಹಿಸುವುದರಿಂದ ರಿಯಾಯಿತಿಯನ್ನು ಕೋರಬಾರದು.

2) ತಮ್ಮ ಕುಟುಂಬದೊಂದಿಗೆ ವಾರ್ಡಿನ ವ್ಯಾಪ್ತಿಗಳಲ್ಲಿ ಸಂಚರಿಸಬಾರದು

3) ಮಾಧ್ಯಮದವರೊಂದಿಗೆ ಮಾತನಾಡಬಾರದು.

4) ತಾವು ಸ್ವಂತವಾಗಿ ರಾಜಕೀಯ ಪಕ್ಷಗಳ ಸಭೆಗಳನ್ನು ಕರೆಯಬಾರದು.

5) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು/ ಜಿಲ್ಲಾ ಚುನಾವಣಾಧಿಕಾರಿ/ ಚುನಾವಣಾಧಿಕಾರಿಗಳ ಮುಂದೆ ವಾಸ್ತವ್ಯ, ವಾಹನ, ರಕ್ಷಣೆ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಅನಗತ್ಯವಾಗಿ ಬೇಡಿಕೆಗಳನ್ನು ಮಾಡಬಾರದು.

6) ವಾರ್ಡುಗಳನ್ನು ಹಂಚಿಕೆ ಮಾಡಿದ ನಂತರ ಯಾವುದೇ ಕಾರಣಕ್ಕೂ ಆಯೋಗದ ಪೂರ್ವಾನುಮತಿ ಪಡೆಯದೆ ತಮ್ಮ ಕೇಂದ್ರಸ್ಥಾನವನ್ನು ಬಿಡಬಾರದು.

7) ನಾಮಪತ್ರ ಪರಿಶೀಲನೆ ದಿನದಂದು ತಮಗೆ ಹಂಚಿಕೆ ಮಾಡಲಾದ ವಾರ್ಡಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಯೋಜನೆಯನ್ನು ಮಾಡದಿರುವುದು ಸೂಕ್ತ.

8) ಮತದಾನ ಮುಗಿದ ನಂತರದ ದಿನ ಅಥವಾ ಮತ ಎಣಿಕೆ ದಿನದಂದು ತಮಗೆ ಹಂಚಿಕೆ ಮಾಡಲಾದ ವಾರ್ಡಿನಲ್ಲಿ ಕರ್ತವ್ಯದಿಂದ ನಿರ್ಗಮಿಸಲು ಯೋಜನೆಯನ್ನು ಮಾಡಬಾರದು.

9) ಅತ್ಯಂತ ತುರ್ತಾಗಿ ನಿರ್ಧಾರ/ ಕ್ರಮ ತೆಗೆದುಕೊಳ್ಳಬೇಕಾದ ವಿಷಯಗಳನ್ನು ಸಮಗ್ರವಾಗಿ ಕಳುಹಿಸುವ ವರದಿಯ ತನಕ ಮುಂದೂಡದೆ ಅಂತಹ ವರದಿಗಳನ್ನು ವೇಗವಾದ ಮಾರ್ಗಗಳ ಮೂಲಕ ತುರ್ತಾಗಿ ಆಗಿಂದಾಗಲೇ ಆಯೋಗದ ಗಮನಕ್ಕೆ ತರತಕ್ಕದ್ದು.

**ಅನುಬಂಧ–1**

**ಚೆಕ್ ಲಿಸ್ಟ್**

ಚುನಾವಣಾ ವೀಕ್ಷಕರ ಆಗಮನ ಕಾಲದಲ್ಲಿ ಜಿಲ್ಲಾ ಚುನಾವಣಾಧಿಕಾರಿ/ ಚುನಾವಣಾಧಿಕಾರಿಗಳು ತಯಾರಿಸಿ ಒದಗಿಸಬೇಕಾದ ಮಾಹಿತಿ/ ವಿವರಗಳು.

**ಎ. ವಾರ್ಡಿನ ಸಂಖ್ಯೆ ಮತ್ತು ಹೆಸರು:**

i. ವಲ್ನರಬಲ್ ದುರ್ಬಲ ಪ್ರದೇಶಗಳ ವಿವರಗಳು

ii. ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ನಕ್ಷೆ ಮತ್ತು ವಲ್ನರಬಲ್ ಪ್ರದೇಶಗಳನ್ನು ಗುರುತು ಮಾಡಿರುವ ವಾರ್ಡಿನ ನಕ್ಷೆ.

**ಬಿ. ಜಿಲ್ಲಾ ಚುನಾವಣಾಧಿಕಾರಿ**

i. ಹೆಸರು

ii. ಬ್ಯಾಚ್ ಆಫ್ ಸರ್ವೀಸ್

iii. ಹುದ್ದೆಗೆ ನಿಯೋಜಿಸಿದ ದಿನಾಂಕ

**ಸಿ. ಡೆಪ್ಯೂಟಿ ಕಮೀಷನರ್ ಆಫ್ ಪೋಲೀಸ್/ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ**

ಹೆಸರುಗಳನ್ನು ವಾರ್ಡಿನ ವ್ಯಾಪ್ತಿಯ ಅನುಸಾರ ನಮೂದಿಸಬೇಕು. ಒಂದು ವೇಳೆ ವಾರ್ಡಿನ ವ್ಯಾಪ್ತಿಯು ಒಬ್ಬರಿಗಿಂತ ಹೆಚ್ಚು ಪೋಲೀಸ್ ಉಪ ಆಯುಕ್ತರು /ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ವ್ಯಾಪ್ತಿಗಳಿಗೆ ಒಳಪಡುವ ಹಾಗಿದ್ದಲ್ಲಿ ಎರಡೂ ಅಧಿಕಾರಿಗಳ ವಿವರ ನಮೂದಿಸುವುದು.

i. ಹೆಸರು

ii. ಬ್ಯಾಚ್ ಆಫ್ ಸರ್ವೀಸ್

iii. ಹುದ್ದೆಗೆ ನಿಯೋಜಿಸಿದ ದಿನಾಂಕ

**ಡಿ. ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿ**

i. ಹೆಸರು

ii. ಪದನಾಮ

iii. ಹುದ್ದೆಗೆ ಹಾಜರಾದ ದಿನಾಂಕ

iv. ಚುನಾವಣೆ ನಡೆಸುವ ಪ್ರಕ್ರಿಯೆಯಲ್ಲಿ ಅನುಭವ

v. ನಿಯೋಜಿಸಿದ ದಿನಾಂಕ

**ಇ. ಜನಸಂಖ್ಯೆ**

i. ಗಂಡು

ii. ಹೆಣ್ಣು

iii. ಒಟ್ಟು

**ಎಫ್. ಮತದಾರರ ವಿವರಗಳು**

**ಒಟ್ಟು ಮತದಾರರು**

| ಗಂಡು | ಹೆಣ್ಣು | ಸೇವಾ ಮತದಾರರು | ಒಟ್ಟು ಮತದಾರರು | ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ ಹೊಂದಿರುವವರು | ಭಾವಚಿತ್ರವಿರುವ ಮತದಾರರು |
|---|---|---|---|---|---|
| | | | | | |

**ಜಿ. ಮತದಾರರ ಪಟ್ಟಿ ವಿವರಗಳು**

i. ಪರಿಷ್ಕೃತ ಮತದಾರರ ಪಟ್ಟಿಯನ್ನು ಪ್ರಕಟಿಸಿದ ದಿನಾಂಕ (ಅರ್ಹತಾ ದಿನಾಂಕ 01–01– )

| ದಿನಾಂಕ | ತಿಂಗಳು | ವರ್ಷ |
|---|---|---|
| | | |

ii. ಮತದಾರರ ಪಟ್ಟಿಗಳ ಪ್ರತಿಗಳನ್ನು ನೋಂದಾಯಿಸಿದ ರಾಜಕೀಯ ಪಕ್ಷಗಳಿಗೆ ಸರಬರಾಜು ಮಾಡಲಾಗಿದೆಯೇ?

| ಹೌದು | ಇಲ್ಲ | ಹೌದಾದಲ್ಲಿ ಅದರ ದಿನಾಂಕ | ಇಲ್ಲವಾದಲ್ಲಿ ಅದಕ್ಕೆ ಕಾರಣ |
|---|---|---|---|
| | | | |

iii. ಬದಲಾವಣೆ ಮಾಡಲಾದ ವಿವರಗಳನ್ನು ಮತಗಟ್ಟೆವಾರು ಪಟ್ಟಿ ಮಾಡಿ ಒದಗಿಸುವುದು.

iv. ಕೊನೆಯದಾಗಿ ಪ್ರಕಟಣೆ ಮಾಡಿದ ದಿನಾಂಕದ ತರುವಾಯ ಸೇರ್ಪಡೆ ಮತ್ತು ಬಿಡತಕ್ಕವುಗಳು

| ಮತಗಟ್ಟೆಗಳು | | ಪುರುಷ ಮತದಾರರು | ಮಹಿಳಾ ಮತದಾರರು | ಒಟ್ಟು |
|---|---|---|---|---|
| | | ಮೂಲ | | |
| | | ಸೇರ್ಪಡೆಗಳು | | |
| | | ಬಿಡತಕ್ಕವುಗಳು | | |
| | | ಅಂತಿಮ ಸಂಖ್ಯೆ | | |
| | | ಮೂಲ | | |
| | | ಸೇರ್ಪಡೆಗಳು | | |
| | | ಬಿಡತಕ್ಕವುಗಳು | | |
| | | ಅಂತಿಮ ಸಂಖ್ಯೆ | | |

v. ಮತದಾರರ ಪೂರಕ ಪಟ್ಟಿ ಮುದ್ರಿಸಿದ ದಿನಾಂಕ (ನಿರಂತರ ಪರಿಷ್ಕರಣೆ ಅಡಿಯಲ್ಲಿ ಮಾಡಿರುವ)

| ದಿನಾಂಕ | ತಿಂಗಳು | ವರ್ಷ |
|---|---|---|
| | | |

vi. ರಾಜಕೀಯ ಪಕ್ಷಗಳಿಗೆ ಒದಗಿಸಲು ದೃಡೀಕೃತ ಪ್ರತಿಗಳನ್ನು ತಯಾರಿಸಿದ ದಿನಾಂಕ

| ದಿನಾಂಕ | ತಿಂಗಳು | ವರ್ಷ |
|---|---|---|
| | | |

**ಹೆಚ್. ಮತಗಟ್ಟೆಗಳು**

i. ಒಟ್ಟು ಮತಗಟ್ಟೆಗಳು

ii. ಮತಗಟ್ಟೆಗಳ ಪಟ್ಟಿಗೆ ಚುನಾವಣಾ ಆಯೋಗದಿಂದ ಅನುಮತಿ ಪಡೆಯಲಾಗಿದೆಯೇ ಹೌದು/ಇಲ್ಲ

iii. ಎಲ್ಲ ಮತಗಟ್ಟೆಗಳಿಗೆ ಚುನಾವಣಾಧಿಕಾರಿ/ಸಹಾಯಕ ಚುನಾವಣಾಧಿಕಾರಿ ಭೇಟಿ ನೀಡಿದ್ದಾರೆಯೇ ಹೌದು/ಇಲ್ಲ

iv. **ಮತಗಟ್ಟೆಗಳ ವಿವರ.**

| ಒಟ್ಟು ಮತಗಟ್ಟೆಗಳ ಸಂಖ್ಯೆ | ಎರಡು ಮತಗಟ್ಟೆಗಳು ಒಂದೇ ಕಟ್ಟಡದಲ್ಲಿರುವ ಸ್ಥಳ | ಮೂರು ಮತಗಟ್ಟೆಗಳು ಒಂದೇ ಕಟ್ಟಡದಲ್ಲಿರುವ ಸ್ಥಳ | ನಾಲ್ಕು ಮತಗಟ್ಟೆಗಳು ಒಂದೇ ಕಟ್ಟಡದಲ್ಲಿರುವ ಸ್ಥಳ | ಐದು ಮತಗಟ್ಟೆಗಳು ಒಂದೇ ಕಟ್ಟಡದಲ್ಲಿರುವ ಸ್ಥಳ | ಆರು ಮತಗಟ್ಟೆಗಳು ಒಂದೇ ಕಟ್ಟಡದಲ್ಲಿರುವ ಸ್ಥಳ | ಆರಕ್ಕಿಂತ ಹೆಚ್ಚು ಮತಗಟ್ಟೆಗಳು ಒಂದೇ ಕಟ್ಟಡದಲ್ಲಿರುವ ಸ್ಥಳ |
|---|---|---|---|---|---|---|
| | | | | | | |

v. **ವಾರ್ಡಿನ ಮತಗಟ್ಟೆಗಳಲ್ಲಿ ಮತದಾರರ ವಿವರ**

| ಒಟ್ಟು ಮತಗಟ್ಟೆಗಳ ಸಂಖ್ಯೆ | 300ಕ್ಕಿಂತ ಕಡಿಮೆ | 300–800 | 801–1000 | 1001–1200 | 1201–1500 | 1500ಕ್ಕಿಂತ ಹೆಚ್ಚು |
|---|---|---|---|---|---|---|
| | | | | | | |

**ಐ. ವಾರ್ಡಿನ ಮತಗಟ್ಟೆಗಳಲ್ಲಿ ಮತದಾರರ ವಿವರ**

i. ಮತದಾರರಿಗೆ ಬೆದರಿಕೆ ಒಡ್ಡುವಂತಹ ಪ್ರದೇಶಗಳ ನಕ್ಷೆ.

ii. ವಲ್ನರಬಲ್ ಮತಗಟ್ಟೆಗಳನ್ನು ಗುರುತಿಸಲಾಗಿದೆಯೇ ಅಥವಾ ಇಲ್ಲವೇ (ಕಾರಣಗಳೊಂದಿಗೆ ಪಟ್ಟಿ ನೀಡುವುದು).

**ಜೆ. ವಿದ್ಯುನ್ಮಾನ ಮತಯಂತ್ರಗಳು**

| ವಾರ್ಡಿನ ಸಂಖ್ಯೆ ಮತ್ತು ಹೆಸರು | ಮತಗಟ್ಟೆಗಳಿಗೆ ಅಗತ್ಯವಿರುವ ಒಟ್ಟು ಇವಿಎಂಗಳ ಸಂಖ್ಯೆ | ಮೀಸಲು ಇವಿಎಂಗಳ ಒಟ್ಟು ಸಂಖ್ಯೆ | ತರಬೇತಿಗಾಗಿ ಗುರುತಿಸಿದ ಇವಿಎಂಗಳ ಒಟ್ಟು ಸಂಖ್ಯೆ | ಅಗತ್ಯವಿರುವ ಒಟ್ಟು ಸಂಖ್ಯೆ | ಲಭ್ಯವಿರುವ ಸಂಖ್ಯೆ |
|---|---|---|---|---|---|
| | | | | | |

**ಕೆ. ಜಿಲ್ಲಾ ಚುನಾವಣಾಧಿಕಾರಿಗಳ 1ನೇ ಸುತ್ತಿನ ರ್‍ಯಾಂಡಮೈಸೇಷನ್‌ನಲ್ಲಿ ವಾರ್ಡುವಾರು ಹಂಚಿಕೆ ಮಾಡಲಾಗಿದೆಯೇ**

ಹೌದು/ಇಲ್ಲ

**ಚುನಾವಣಾಧಿಕಾರಿ ವಿದ್ಯುನ್ಮಾನ ಮತಯಂತ್ರಗಳನ್ನು ರ್‍ಯಾಂಡಮೈಸೇಷನ್ ಮಾಡಿ ಸೀಲು ಮಾಡಲು ದಿನಾಂಕ ಮತ್ತು ಸ್ಥಳಗಳನ್ನು ಗೊತ್ತು ಮಾಡಿರುವ ಬಗ್ಗೆ.**

i) ದಿನಾಂಕ

ii) ಸ್ಥಳ

**ಎಲ್. ಮಸ್ಟರಿಂಗ್, ಡಿಮಸ್ಟರಿಂಗ್ ಮತ್ತು ಮತ ಎಣಿಕೆ ಕೇಂದ್ರಗಳನ್ನು ಗುರುತಿಸಿರುವ ಬಗ್ಗೆ ಮತ್ತು ವಿಶೇಷ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆಯೇ?**

| ಸ್ಥಳದ ಹೆಸರು | ಚಟುವಟಿಕೆ | ಸೌಲಭ್ಯ | | ಸ್ಥಳಾವಕಾಶ | | ಬೆಳಕಿನ ವ್ಯವಸ್ಥೆ | | ನೀರು ಮತ್ತು ಶೌಚಾಲಯ ವ್ಯವಸ್ಥೆ | | ವಿನ್ಯಾಸ ನಕ್ಷೆ | |
|---|---|---|---|---|---|---|---|---|---|---|---|
| | | ಸಾಕಾಗುವಷ್ಟು | ಸಾಕಾಗುವಷ್ಟಿಲ್ಲದ | ಸಾಕಾಗುವಷ್ಟು | ಸಾಕಾಗುವಷ್ಟಿಲ್ಲದ | ಸಾಕಾಗುವಷ್ಟು | ಸಾಕಾಗುವಷ್ಟಿಲ್ಲದ | ಸಾಕಾಗುವಷ್ಟು | ಸಾಕಾಗುವಷ್ಟಿಲ್ಲದ | ತಯಾರಿಸಿದೆ | ತಯಾರಿಸಿಲ್ಲ |

**ಎಮ್. ಸಿಬ್ಬಂದಿಗಳ ಲಭ್ಯತೆ**

**ಮತಗಟ್ಟೆ ಸಿಬ್ಬಂದಿ**

| ವಾರ್ಡಿಗೆ ಅಗತ್ಯವಿರುವ ಮತಗಟ್ಟೆ ಸಿಬ್ಬಂದಿಗಳ ಒಟ್ಟು ಸಂಖ್ಯೆ | ಲಭ್ಯವಿರುವ ರಾಜ್ಯ ಸರ್ಕಾರಿ ಸಿಬ್ಬಂದಿಗಳ ಒಟ್ಟು ಸಂಖ್ಯೆ | ಲಭ್ಯವಿರುವ ರಾಜ್ಯ ಸರ್ಕಾರದ ಅಧೀನದ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ | ಲಭ್ಯವಿರುವ ಕೇಂದ್ರ ಸರ್ಕಾರಿ ಸಿಬ್ಬಂದಿಗಳ ಒಟ್ಟು ಸಂಖ್ಯೆ | ಲಭ್ಯವಿರುವ ಕೇಂದ್ರ ಸರ್ಕಾರ, ಅಧೀನದ ಸಾರ್ವಜನಿಕ ಉದ್ದಿಮೆಗಳ ಸಿಬ್ಬಂದಿ ಸಂಖ್ಯೆ |
|---|---|---|---|---|
| | | | | |

**ಎನ್. ಪೋಲೀಸ್ ಸಿಬ್ಬಂದಿ**

ಪದನಾಮದೊಂದಿಗೆ ಪೋಲೀಸ್ ಸಿಬ್ಬಂದಿಗಳ ಒಟ್ಟು ಸಂಖ್ಯೆ

| ಪೋಲೀಸ್ ಕಮೀಷನರ್ | ಡೆಪ್ಯೂಟಿ ಕಮೀಷನರ್ ಆಫ್ ಪೋಲೀಸ್ | ಪೋಲೀಸ್ ಇನ್ಸ್‌ಪೆಕ್ಟರ್ | ಪೋಲೀಸ್ ಸಬ್ ಇನ್ಸ್‌ಪೆಕ್ಟರ್ | ಪೇದೆಗಳು |
|---|---|---|---|---|
| | | | | |

i) ಅಗತ್ಯವಿರುವ ಸಿಪಿಎಫ್

ii) ನಿಯಂತ್ರಣ ಕೊಠಡಿ ಕಾರ್ಯಾಚರಣೆ (ಪೋಲೀಸ್ ಮತ್ತು ಚುನಾವಣಾಧಿಕಾರಿ, ಜಿಲ್ಲಾ ಚುನಾವಣಾಧಿಕಾರಿ)

ಒ. ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ.

i) ವಶಕ್ಕೆ ತೆಗೆದುಕೊಂಡಿರುವ ಶಸ್ತ್ರಾಸ್ತ್ರಗಳು

ii) ಜಾಮೀನು ಪತ್ರಗಳು

iii) ಪ್ರತಿಬಂಧಕ ಸ್ಥಾನಬದ್ಧತೆ

iv) ಎನ್.ಎಸ್.ಎ.

v) ಗಡಿಪಾರು ಮಾಡುವಿಕೆ

vi) ನಿಷೇಧ ಪ್ರಕರಣಗಳು ಅನ್ವಯಿಸಿದಲ್ಲಿ

vii) ಭದ್ರತೆಯನ್ನು ಒದಗಿಸಿರುವ ವ್ಯಕ್ತಿಗಳ ಪಟ್ಟಿ

viii) ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಆಯೋಗಕ್ಕೆ/ಪೋಲೀಸ್ ಕಮೀಷನರ್‌ಗೆ ಕಳುಹಿಸುವ ವರದಿಯನ್ನು ಚುನಾವಣಾ ವೀಕ್ಷಕರಿಗೂ ಕಳುಹಿಸುವುದು.

ಪಿ. ಮಾದರಿ ನೀತಿ ಸಂಹಿತೆಯನ್ನು ಅನುಷ್ಠಾನಗೊಳಿಸಲು ಮಾಡಿರುವ ಸಿದ್ಧತೆಗಳು

i) ಸಾರ್ವಜನಿಕ ಕಟ್ಟಡಗಳ ವಿರೂಪಗೊಳಿಸುವುದನ್ನು ತಡೆಗಟ್ಟಲು ಮಾಡಿಕೊಂಡಿರುವ ಸಿದ್ಧತೆಗಳು.

a) ವಾರ್ಡು ವ್ಯಾಪ್ತಿವಾರು ಕಾರ್ಯಗತ ಜಾರಿದಳವನ್ನು (Enforcement Squad) ರಚಿಸಿರುವ ಬಗ್ಗೆ.

ii) ಅಧಿಕಾರಿಗಳಿಗೆ, ಅಭ್ಯರ್ಥಿಗಳಿಗೆ, ರಾಜಕೀಯ ಪಕ್ಷಗಳಿಗೆ ಅವರು ಕರ್ತವ್ಯ ಚ್ಯುತಿ ಮಾಡಿದಲ್ಲಿ ಕೈಗೊಳ್ಳುವ ಕ್ರಮದ ಬಗ್ಗೆ ಮಾರ್ಗದರ್ಶನ.

iii) ರಾಜಕೀಯ ಪಕ್ಷಗಳ ಅಥವಾ ಅಭ್ಯರ್ಥಿಗಳ ಸಭೆ ಮತ್ತು ಮೆರವಣಿಗೆ ನಡೆಸುವ ಸ್ಥಳಗಳ ಬಗ್ಗೆ ತಿಳಿಸಲು ನೋಡಲ್ ಅಧಿಕಾರಿ.

a) ಹೆಸರು ಮತ್ತು ಸಂಪರ್ಕಿಸುವ ದೂರವಾಣಿ/ಮೊಬೈಲ್ ಸಂಖ್ಯೆ

iv) ಅಭ್ಯರ್ಥಿಗಳ ಚುನಾವಣಾ ವೆಚ್ಚಗಳನ್ನು ಪರಿಶೀಲಿಸಲು ವಾರ್ಡಿಗೆ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆಯೇ [ಹೌದು/ಇಲ್ಲ]

v) ಸಾಮಾನ್ಯವಾಗಿ ಪ್ರಚಾರಕ್ಕೆ ಅಗತ್ಯವಿರುವ ವಸ್ತುಗಳ ಪ್ರಚಲಿತದಲ್ಲಿರುವ ಮಾರುಕಟ್ಟೆ ಬೆಲೆಯನ್ನು ಪಟ್ಟಿ ಮಾಡಲಾಗಿದೆಯೇ? [ಹೌದು/ಇಲ್ಲ]

**ಕ್ಯೂ.** ಚುನಾವಣಾ ಸಾಮಗ್ರಿಗಳು, ನಮೂನೆಗಳ, ಪ್ರಪತ್ರಗಳು ಇತ್ಯಾದಿಗಳ ಬಗ್ಗೆ ಮಾಡಿಕೊಂಡಿರುವ ಸಿದ್ಧತೆ

| ಪಡೆದು ಕೊಂಡಿರುವ ಅಳಿಸಲಾಗದ ಶಾಯಿ ಫಾಯಿಲ್‌ಗಳ ಸಂಖ್ಯೆ | ಪಡೆದು ಕೊಂಡಿರುವ ಗ್ರೀನ್ ಪೇಪರ್ ಸೀಲುಗಳ ಸಂಖ್ಯೆ | ಪಡೆದು ಕೊಂಡಿರುವ ಸ್ಟ್ರಿಪ್ ಸೀಲುಗಳ ಸಂಖ್ಯೆ | ಆಯೋಗದ ರಹಸ್ಯ ಸೀಲುಗಳನ್ನು ಪಡೆಯಲಾಗಿದೆಯೇ | ಪ್ರಿಸೈಡಿಂಗ್ ಅಧಿಕಾರಿಗಳ ಕೈಪಿಡಿ ಇತ್ಯಾದಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿದೆಯೇ? | ಶಾಸನಬದ್ಧ ಅಥವಾ ಶಾಸನ ಬದ್ಧವಲ್ಲದ ನಮೂನೆಗಳು ಇತ್ಯಾದಿ ಲಭ್ಯವಿದೆಯೇ? |
|---|---|---|---|---|---|
| | | | | | |

**ಆರ್. ಮತಗಟ್ಟೆ ಸಿಬ್ಬಂದಿಯ ರ್‍ಯಾಂಡಮೈಸೇಷನ್ ಪ್ರಕ್ರಿಯೆ**

i) ಮತಗಟ್ಟೆ ಸಿಬ್ಬಂದಿಗಳ ಡಾಟಾಬೇಸ್ ತಯಾರಿಸಲಾಗಿದೆಯೇ | ಹೌದು/ಇಲ್ಲ |

ii) ಮತಗಟ್ಟೆ ತಂಡ ರಚಿಸಲು ನಿಗದಿಪಡಿಸಿದ ದಿನಾಂಕ

| ದಿನಾಂಕ | ತಿಂಗಳು | ವರ್ಷ |
|---|---|---|
| | | |

iii) ಮತಗಟ್ಟೆ ತಂಡಕ್ಕೆ ಮತಗಟ್ಟೆಯನ್ನು ಹಂಚಲು ನಿಗದಿಪಡಿಸಿದ ದಿನಾಂಕ

| ದಿನಾಂಕ | ತಿಂಗಳು | ವರ್ಷ |
|---|---|---|
| | | |

**ಎಸ್. ಮತಗಟ್ಟೆ ಸಿಬ್ಬಂದಿಗೆ ತರಬೇತಿ**

i) ಮತಗಟ್ಟೆ ಸಿಬ್ಬಂದಿ ತರಬೇತಿಯ ವೇಳಾಪಟ್ಟಿ ತಯಾರಿಸಲಾಗಿದೆಯೇ | ಹೌದು/ಇಲ್ಲ |

ii) ಮತಗಟ್ಟೆ ಸಿಬ್ಬಂದಿಗೆ ಇವಿಎಂ ತರಬೇತಿ ನೀಡುವ ಬಗ್ಗೆ ವೇಳಾಪಟ್ಟಿ ತಯಾರಿಸಲಾಗಿದೆಯೇ | ಹೌದು/ಇಲ್ಲ |

iii) ಸೆಕ್ಟರ್ ಮ್ಯಾಜಿಸ್ಟ್ರೇಟ್/ ಅಧಿಕಾರಿಗಳಿಗೆ ತರಬೇತಿ ನೀಡುವ ವೇಳಾಪಟ್ಟಿ ತಯಾರಿಸ ಲಾಗಿದೆಯೇ? | ಹೌದು/ಇಲ್ಲ |

ಟಿ. ಮಸ್ಟರಿಂಗ್ ವ್ಯವಸ್ಥೆಗಳು

i) ಸ್ಥಳದ ಹೆಸರು ಮತ್ತು ವಿಳಾಸ

ii) ನಿರ್ದಿಷ್ಟ ಮತಗಟ್ಟೆಗಳಿಗೆ ಬೇಗನೆ ಕಳುಹಿಸುವ ಅಗತ್ಯವಿದೆಯೇ

iii) ಹೌದಾದಲ್ಲಿ ಕಾರಣಗಳು

ಯು. ಡಿಮಸ್ಟರಿಂಗ್ ವ್ಯವಸ್ಥೆಗಳು

i) ಸ್ಥಳ

ii) ಡಿಮಸ್ಟರಿಂಗ್‌ಗೆ ಒಟ್ಟು ಟೇಬಲ್‌ಗಳ ಸಂಖ್ಯೆ

iii) ವಿಶೇಷ ಕೌಂಟರುಗಳನ್ನು ಸ್ಥಾಪಿಸಲು ಯೋಜಿಸಲಾಗಿರುವ ಬಗ್ಗೆ

ವಿ. **ಭದ್ರತಾ ಕೊಠಡಿ ಸ್ಥಳ ಮತ್ತು ರಕ್ಷಣಾ ವ್ಯವಸ್ಥೆ**

ಡಬ್ಲ್ಯೂ. **ಎಣಿಕೆ ವ್ಯವಸ್ಥೆಗಳು**

i) ಹೆಚ್ಚುವರಿ ಸಹಾಯಕ ಚುನಾವಣಾಧಿಕಾರಿ ನೇಮಕಾತಿ ಅಗತ್ಯವಿದ್ದಲ್ಲಿ

ii) ಎಣಿಕೆ ಕೇಂದ್ರದ ಸ್ಥಳ–ಆಯೋಗದ ಅನುಮೋದನೆ ಪಡೆಯಲಾಗಿದೆಯೇ?

iii) ಅಂಚೆ ಮತಪತ್ರಗಳ ಸ್ವೀಕೃತಿ ಮತ್ತು ಎಣಿಕೆ ಮಾಡಲು ಮಾಡಿರುವ ಸಿದ್ಧತೆಗಳು

**ಅನುಬಂಧ–2**

(ಮೊದಲನೆ ವರದಿಯನ್ನು ವೀಕ್ಷಕರು ಆಗಮಿಸಿದ 5 ದಿನಗಳ ನಂತರ(7 ದಿನಗಳ ಒಳಗಾಗಿ) ಆಯೋಗಕ್ಕೆ ಕಳುಹಿಸತಕ್ಕದ್ದು)

**ವೀಕ್ಷಕರ ವರದಿ–1**

**ಮತದಾನ ಸಿದ್ಧತೆ ಕುರಿತು ವರದಿ (ದಯವಿಟ್ಟು ಮಾಡಲಾಗಿದೆ ಅಥವಾ ಮಾಡಿರುವುದಿಲ್ಲ ಎಂದು ನಮೂದಿಸಿ)**

| ಹೌದು | ಇಲ್ಲ |
|---|---|
| | |

| | |
|---|---|
| ವೀಕ್ಷಕರ ಸಂಕೇತ | |
| ವಾರ್ಡಿನ ಸಂಖ್ಯೆ ಮತ್ತು ಹೆಸರು | |

| | | | | |
|---|---|---|---|---|
| 1. | ಯಾವುದಾದರೂ ಸಂದಿಗ್ಧ ಖಾಲಿಸ್ಥಾನ ಇದೆಯೇ | ಹೌದು | ಇಲ್ಲ | |
| 2. | ಮತದಾರರ ಪಟ್ಟಿ ಪ್ರಕಟಿಸಿ ರಾಜಕೀಯ ಪಕ್ಷಗಳಿಗೆ ನೀಡಲಾಗಿದೆಯೇ | ಹೌದು | ಇಲ್ಲ | |
| 3. | ಅಫಿಡವಿಟ್‌ಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆಯೇ? ಸೂಚನಾ ಫಲಕಗಳಲ್ಲಿ ಪ್ರಕಟಿಸಲಾಗಿದೆಯೇ? | ಹೌದು | ಇಲ್ಲ | |
| 4. | ಸಿದ್ಧತೆಗಳು<br>ಎ) ಇವಿಎಂಗಳ ರ್‍ಯಾಂಡಮೈಸೇಷನ್ ಮತ್ತು ಸೀಲು ಮಾಡುವಿಕೆ<br>ಬಿ) ಮತಪತ್ರಗಳ ಮುದ್ರಣ<br>ಸಿ) ಮತಗಟ್ಟೆ ಸಿಬ್ಬಂದಿಗೆ ಅಂಚೆ ಮತಪತ್ರಗಳನ್ನು ನೀಡಲು ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಬಗ್ಗೆ<br>ಡಿ) ಪೋಲೀಸ್/ರಕ್ಷಣಾ ಇಲಾಖೆ/ವಾಹನ ಚಾಲಕರು/ಡಿ. ದರ್ಜೆ ನೌಕರರಿಗೆ ಅಂಚೆ ಮತಪತ್ರ ನೀಡುವ ಬಗ್ಗೆ<br>ಇ) ಸೇವಾ ಮತದಾರರಿಗೆ ಅಂಚೆ ಮತಪತ್ರಗಳನ್ನು ಕಳುಹಿಸುವ ಬಗ್ಗೆ | ಮಾಡಲಾಗಿದೆ | ಮಾಡಿರುವುದಿಲ್ಲ | |
| 5. | ಮತಗಟ್ಟೆ ಸಿಬ್ಬಂದಿಗಳ ಪಟ್ಟಿ ತಯಾರಿಕೆ | | | |
| | 2ನೇ ಸುತ್ತಿನ ರ್‍ಯಾಂಡಮೈಸೇಷನ್ ನಡೆಸುವ ದಿನಾಂಕಗಳು | | | |
| | 3ನೇ ಸುತ್ತಿನ ರ್‍ಯಾಂಡಮೈಸೇಷನ್ ನಡೆಸುವ ದಿನಾಂಕಗಳು | | | |
| 6. | ತರಬೇತಿ | ದಿನ | ತಿಂಗಳು | ವರ್ಷ |
| | ಮೊದಲನೆ ತರಬೇತಿ ದಿನಾಂಕ | | | |
| | ಎರಡನೆ ತರಬೇತಿ ದಿನಾಂಕ | | | |
| 7. | ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ | | | |
| 8. | ದುರ್ಬಲ ಪ್ರದೇಶಗಳ ನಕ್ಷೆ ತಯಾರಿಸಲಾಗಿದೆಯೇ ಮತ್ತು ಸಂದಿಗ್ಧ ಮತಗಟ್ಟೆಗಳು ಮತ್ತು ಗುಂಪುಗಳನ್ನು ಗುರುತಿಸಿರುವ ಬಗ್ಗೆ | | | |

| | | | | |
|---|---|---|---|---|
| 9. | ಮಸ್ಟರಿಂಗ್, ಡಿಮಸ್ಟರಿಂಗ್ ಮತ್ತು ಭದ್ರತಾ ಕೊಠಡಿಗಳ ಸಿದ್ಧತೆ ಬಗ್ಗೆ | ಮಾಡಲಾಗಿದೆ | ಮಾಡಿರುವುದಿಲ್ಲ | |
| 10. | ಮಾದರಿ ನೀತಿ ಸಂಹಿತೆ ಅನುಷ್ಠಾನಗೊಳಿಸಲು ಮಾಡಿರುವ ಸಿದ್ಧತೆಗಳು<br>ಎ) ಕಾರ್ಯ ತಂಡ ರಚನೆ<br>ಬಿ) ದೂರುಗಳನ್ನು ಸ್ವೀಕರಿಸಲು ಮತ್ತು ದೂರುಗಳ ಬಗ್ಗೆ ಕ್ರಮ ಕೈಗೊಳ್ಳುವುದು. | ಹೌದು | ಇಲ್ಲ | |
| 11. | ಸಂವಹನ ಸಾಧಿಸಲು (ಪರಸ್ಪರ ಸಂಪರ್ಕಕ್ಕೆ) ಮಾಡಿರುವ ಯೋಜನೆ | ಹೌದು | ಇಲ್ಲ | |
| 12. | ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿರುವ ಬಗ್ಗೆ | ಹೌದು | ಇಲ್ಲ | |
| 13. | ಅಭ್ಯರ್ಥಿಗಳ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಪರೀಕ್ಷಿಸುವ ಬಗ್ಗೆ | | | |
| | ಎ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಪ್ರಕರಣ 26–ಎ ರಂತೆ ಕರ್ನಾಟಕ ಮುನಿಸಿಪಲ್ ಕೌನ್ಸಿಲರ್ (ಚುನಾವಣೆ) ನಿಯಮಗಳು 1979ಕ್ಕೆ ತಿದ್ದುಪಡಿ ಮಾಡಿ ನಿಯಮ 22ಬಿ, 22ಸಿ, 22ಡಿ, 22ಇ ರಲ್ಲಿ ಚುನಾವಣಾ ವೆಚ್ಚದ ಗರಿಷ್ಠ ಮಿತಿ ಮತ್ತು ವೆಚ್ಚ ವಿವರ ಸಲ್ಲಿಸಿದ ನಮೂನೆಗಳನ್ನು ನಿಗದಿಪಡಿಸಿರುವ ಬಗ್ಗೆ ಚುನಾವಣಾ ಕಾರ್ಯದಲ್ಲಿ ತೊಡಗಿರುವ ಅಧಿಕಾರಿ/ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಿರುವ ಬಗ್ಗೆ. | | | |
| | ಬಿ. ಚುನಾವಣೆಗೆ ಸ್ಪರ್ಧಿಸಿದ ಪ್ರತಿಯೊಬ್ಬ ಅಭ್ಯರ್ಥಿಗೆ ಅವರು ನಾಮಪತ್ರ ಸಲ್ಲಿಸಿದ ದಿನಾಂಕದಿಂದ ಪ್ರತಿ ದಿನ ಮಾಡುವ ಖರ್ಚುಗಳನ್ನು ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ನಿರ್ವಹಿಸಲು ಮತ್ತು ಅಫಿಡವಿಟ್ ಅನ್ನು ಸಲ್ಲಿಸಲು ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲು ಸಂಬಂಧಿಸಿದ ಚುನಾವಣಾಧಿಕಾರಿಗೆ ವರದಿಗಳನ್ನು ಮತ್ತು ಅಫಿಡವಿಟ್ ನಮೂನೆಯನ್ನು ನೀಡಿರುವ ಬಗ್ಗೆ. | | | |
| | ಸಿ. ಸ್ಪರ್ಧಿಸುವ ಅಭ್ಯರ್ಥಿಗಳ ಮತ್ತು ರಾಜಕೀಯ ಪಕ್ಷಗಳಿಗೆ ಚುನಾವಣಾ ವೆಚ್ಚದ ಬಗ್ಗೆ ಸಂಬಂಧಿಸಿದ ಜಿಲ್ಲಾ ಚುನಾವಣಾಧಿಕಾರಿಗಳ ಸಭೆ ನಡೆಸಿ ತಿಳುವಳಿಕೆ ನೀಡುವ ಬಗ್ಗೆ. | | | |
| | ಡಿ. ಪ್ರತಿದಿನ ಅಭ್ಯರ್ಥಿಗಳು ನಿರ್ವಹಿಸಿರುವ ಚುನಾವಣಾ ವೆಚ್ಚದ ಲೆಕ್ಕ ಪತ್ರಗಳನ್ನು ಪರೀಕ್ಷಿಸಲು ನಿಗದಿತ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆಯೇ | | | |
| | ಇ. ಚುನಾವಣಾ ವೆಚ್ಚದ ವೋಚರು/ದಾಖಲೆಗಳನ್ನು ಪರಿಶೀಲಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆಯೇ | | | |
| | ಎಫ್.ಹೌದಾದಲ್ಲಿ, ಪರೀಕ್ಷಿಸಲು ನಿಗದಿಪಡಿಸಿರುವ ದಿನಾಂಕಗಳು | | | |
| | ಜಿ. ಚುನಾವಣಾ ವೆಚ್ಚದ ವಿವರಗಳನ್ನು ಪರೀಕ್ಷಿಸಲು ಚುನಾವಣಾ ವೀಕ್ಷಕರು ಸಂಬಂಧಿಸಿದ ನಿಗದಿತ ಅಧಿಕಾರಿಗಳಿಗೆ ಎಲ್ಲಾ ರೀತಿಯಿಂದಲೂ ವಿವರಿಸಿರುತ್ತಾರೆಯೇ | | | |

| | | | | |
|---|---|---|---|---|
| | ಹೆಚ್.ಭಿತ್ತಿಪತ್ರಗಳು, ಮುದ್ರಣ, ವಾಹನಗಳ ಬಾಡಿಗೆ, ಧ್ವನಿವರ್ಧಕ, ಶಾಮಿಯಾನ ಹಾಕಿಸುವ ವೆಚ್ಚ ಮತ್ತು ಬಾಡಿಗೆ ಪೀಠೋಪಕರಣಗಳ ಚಾಲ್ತಿಯಲ್ಲಿರುವ ದರಗಳನ್ನು ಸಂಬಂಧಿಸಿದ ಜಿಲ್ಲಾ ಚುನಾವಣಾಧಿಕಾರಿಗಳು ಒದಗಿಸಿರುವರೇ? | | | |
| | ಐ.ಅದನ್ನು ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಮತ್ತು ನಿಗದಿತ ಅಧಿಕಾರಿಗಳಿಗೆ ತಿಳುವಳಿಕೆ ನೀಡಲಾಗಿದೆಯೇ? | | | |
| | ಜೆ. ಈ ಕೆಳಗೆ ನಮೂದಿಸಿರುವವರ ಮಧ್ಯೆ ಪರಸ್ಪರ ಸಂಪರ್ಕಕ್ಕಾಗಿ ಯೋಜನೆಯನ್ನು ರೂಪಿಸಲಾಗಿದೆಯೇ | | | |
| | i. ಮೀಡಿಯಾ ಸೆಲ್ ಮತ್ತು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಬಗ್ಗೆ ನಿಗಾ ಇಡಲು ನೇಮಿಸಲಾಗಿರುವ ನಿಗದಿತ ಅಧಿಕಾರಿಗಳೊಂದಿಗೆ ಪರಸ್ಪರ ಸಂಪರ್ಕ<br>ii. ಚುನಾವಣಾ ಪ್ರಚಾರಕ್ಕಾಗಿ ವಾಹನಗಳಿಗೆ ಅನುಮತಿ ನೀಡುವ ಪ್ರಾಧಿಕಾರಿ ಮತ್ತು ಅಂತಹ ವಾಹನಗಳ ಮೇಲೆ ಮಾಡುವ ಖರ್ಚಿನ ಬಗ್ಗೆ ನಿಗಾ ವಹಿಸಲು ನೇಮಿಸಲಾಗಿರುವ ನಿಗದಿತ ಅಧಿಕಾರಿಗಳೊಂದಿಗೆ ಪರಸ್ಪರ ಸಂಪರ್ಕ.<br>iii. ಮದ್ಯಪಾನ ಲೈಸೆನ್ಸ್ ನೀಡುವ ಅಬಕಾರಿ ಪ್ರಾಧಿಕಾರಿ ಮತ್ತು ದಾಸ್ತಾನು ಮತ್ತು ವಿತರಣೆ ಮಾಹಿತಿಗಳನ್ನು ಸಂಗ್ರಹಿಸಿ ಪರಿಶೀಲಿಸುವ ನಿಗದಿತ ಅಧಿಕಾರಿಗಳೊಂದಿಗೆ ಪರಸ್ಪರ ಸಂಪರ್ಕ.<br>iv. ಮಾದರಿ ನೀತಿ ಸಂಹಿತೆ ಕಾರ್ಯಗತಗೊಳಿಸುವ ಪ್ರಾಧಿಕಾರಿ ಮತ್ತು ಭಿತ್ತಿಪತ್ರ, ಬ್ಯಾನರ್‌ಗಳು, ಸಭೆಯ ವಿಡಿಯೊ ಚಿತ್ರೀಕರಣ, ಮೆರವಣಿಗೆಗಳು ಇತ್ಯಾದಿಗಳ ಬಗ್ಗೆ ನಿಗಾ ಇಡುವ ನಿಗದಿತ ಅಧಿಕಾರಿಗೆ ಪರಸ್ಪರ ಸಂಪರ್ಕ.<br>v. ಅನಧಿಕೃತ ಮತ್ತು ಕಾನೂನು ಬಾಹಿರವಾಗಿ ಪ್ರಚಾರದಲ್ಲಿ ತೊಡಗಿರುವ ವಾಹನಗಳನ್ನು ವಶಪಡಿಸಿಕೊಳ್ಳುವ ಪೋಲೀಸ್ ಅಧಿಕಾರಿಗಳು ಮತ್ತು ನಿಗದಿತ ಅಧಿಕಾರಿಗಳು. | | | |
| | ಹೆಚ್.ಚುನಾವಣಾ ವೀಕ್ಷಕರು ಅವರ ವಾಸ್ತವ್ಯದ ಅವಧಿಯಲ್ಲಿ ಅಭ್ಯರ್ಥಿಯು ಇತರೆ ವೆಚ್ಚಗಳನ್ನು ಮಾಡಿದಲ್ಲಿ ವೀಕ್ಷಕರ ಗಮನಕ್ಕೆ ಬಂದಿದ್ದಲ್ಲಿ | | | |

ಒಟ್ಟಾರೆ ಕೆಳಕಂಡ ಅಂಶಗಳಿಗೆ ವೀಕ್ಷಕರ ಅಭಿಪ್ರಾಯ :

1.ಸೂಕ್ತ ವ್ಯವಸ್ಥೆಗಳನ್ನು ಮಾಡದೆ ಇದ್ದಲ್ಲಿ ಅದನ್ನು ನಮೂದಿಸುವುದು :

2.ಉತ್ತಮಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳು :

3.ಒಟ್ಟಾರೆಯಾಗಿ ಸಮನ್ವಯದ ಕೊರತೆ :

ಮುಂತಾದ ನಿರ್ದಿಷ್ಟ ವಿಷಯದ ಬಗ್ಗೆ ಕನಿಷ್ಠ 3 ಅಂಶಗಳನ್ನು ನಮೂದಿಸುವುದು.

ದಿನಾಂಕ: ಚುನಾವಣಾ ವೀಕ್ಷಕರ ಸಹಿ

ಸ್ಥಳ:

**ಅನುಬಂಧ–3**

**ಚುನಾವಣಾ ವೀಕ್ಷಕರು 2ನೇ ವರದಿಯನ್ನು ಮತದಾನ ದಿನಾಂಕಕ್ಕಿಂತ 3 ದಿನಗಳ ಮೊದಲು ಕಳುಹಿಸಬೇಕು**

**ವೀಕ್ಷಕರ ವರದಿ–2**

| | |
|---|---|
| ವೀಕ್ಷಕರ ಸಂಕೇತ ಸಂಖ್ಯೆ ಮತ್ತು ಹೆಸರು | |
| ವಾರ್ಡಿನ ಸಂಖ್ಯೆ ಮತ್ತು ಹೆಸರು | |

| | | |
|---|---|---|
| 1 | ಮಾದರಿ ನೀತಿ ಸಂಹಿತೆ ಉಲ್ಲಂಘನೆ ಮಾಡಿರುವ ಪ್ರಕರಣಗಳ ಬಗ್ಗೆ ಸ್ವೀಕರಿಸಿದ ಒಟ್ಟು ದೂರುಗಳ ಸಂಖ್ಯೆ | |
| 2 | ನೋಟೀಸು ನೀಡಿರುವ ಸಂಖ್ಯೆಗಳು | |
| 3 | ವಿಚಾರಣೆ ನಡೆಸಿ ಕ್ರಮ ಕೈಗೊಂಡ ಪ್ರಕರಣಗಳ ಸಂಖ್ಯೆ | |
| 4 | ಬಾಕಿ ಇರುವ ವಿಚಾರಣೆ ಮತ್ತು ಸರಿಪಡಿಸುವ ಕಾರ್ಯ | |
| 5 | ಬಾಕಿ ಇರಲು ಕಾರಣಗಳು | |
| 6 | ದುರ್ಬಲ ಪ್ರದೇಶ, ಅಪಾಯಕಾರಿ ಗುಂಪುಗಳನ್ನು (Critical clusters) ಗುರುತಿಸುವುದು | ಹೌದು/ಇಲ್ಲ |
| 7 | ಪೋಲೀಸ್ ಯೋಜನೆ ರೂಪಿಸಿರುವ ಬಗ್ಗೆ. | ಹೌದು/ಇಲ್ಲ |
| 8 | ನಿಯೋಜಿಸಿದ ಪಡೆಗಳು ಆ ಸ್ಥಳಗಳಿಗೆ ತಲುಪಿರುವ ಬಗ್ಗೆ | ಹೌದು/ಇಲ್ಲ |
| 9 | ದೃಢೀಕೃತ ಮತದಾರರ ಪಟ್ಟಿಗಳನ್ನು ತಯಾರಿಸಿ ಅಭ್ಯರ್ಥಿಗಳಿಗೆ ವಿತರಣೆ ಮಾಡಿರುವ ಬಗ್ಗೆ | ಹೌದು/ಇಲ್ಲ |
| 10 | ಮೈಕ್ರೋ ಅಬ್ಸರ್‌ವರ್‌ಗಳನ್ನು ನಿಯೋಜಿಸಲು ಗುರುತಿಸಿರುವ ಸಂಖ್ಯೆ | |
| 11 | ಪರಸ್ಪರ ಸಂಪರ್ಕ ಯೋಜನೆ ಸಮರ್ಥವಾಗಿದೆಯೇ | ಹೌದು/ಇಲ್ಲ |
| | ಯಾವುದಾದರೂ ವಿಶೇಷ ಮಾಹಿತಿ ಇದ್ದಲ್ಲಿ | |

ದಿನಾಂಕ: ವೀಕ್ಷಕರ ಸಹಿ

ಸ್ಥಳ:

## ಅನುಬಂಧ-4

ಚುನಾವಣಾ ವೀಕ್ಷಕರು ಮತದಾನ ಮುಗಿದ ನಂತರದ ದಿನ ಅಥವಾ ಮತದಾರರ ವಹಿ ಮತ್ತು ಇತರ ದಾಖಲೆಗಳನ್ನು ಪರಿಶೀಲಿಸಿದ ನಂತರ ಕಳುಹಿಸತಕ್ಕದ್ದು.

### ವೀಕ್ಷಕರ ವರದಿ-3

| | |
|---|---|
| ವೀಕ್ಷಕರ ಸಂಕೇತ ಸಂಖ್ಯೆ ಮತ್ತು ಹೆಸರು | |
| ವಾರ್ಡಿನ ಸಂಖ್ಯೆ ಮತ್ತು ಹೆಸರು | |

| | | |
|---|---|---|
| 1 | ಒಟ್ಟು ಮತಗಟ್ಟೆಗಳ ಸಂಖ್ಯೆ | |
| 2 | ಅಣಕು ಮತದಾನ ನಡೆಸದೆ ಇರುವ ಒಟ್ಟು ಮತಗಟ್ಟೆಗಳ ಸಂಖ್ಯೆ (ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |
| 3 | ಮತಗಟ್ಟೆ ಏಜೆಂಟ್‌ಗಳು ಇಲ್ಲದೇ ಇರುವ ಮತಗಟ್ಟೆಗಳ ಸಂಖ್ಯೆ (ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |
| 4 | ಕೇವಲ ಒಬ್ಬ ಮತಗಟ್ಟೆ ಏಜೆಂಟ್ ಇರುವ ಮತಗಟ್ಟೆಗಳ ಸಂಖ್ಯೆ (ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |
| 5 | ಮತದಾನವು 2 ಗಂಟೆಗಿಂತ ಹೆಚ್ಚು ಕಾಲ ಸ್ಥಗಿತಗೊಂಡ ಮತ್ತು ತಡವಾಗಿ ಪ್ರಾರಂಭವಾದ ಮತಗಟ್ಟೆಗಳ ಸಂಖ್ಯೆ (ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |
| 6 | ಮತದಾನ ಸ್ಥಗಿತಗೊಂಡು ಮತ್ತು ಮುಂದುವರೆಸಲು ಸಾಧ್ಯವಾಗದ ಮತಗಟ್ಟೆಗಳ ಸಂಖ್ಯೆ (ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |
| 7 | ನಿಗದಿಪಡಿಸಿದ ಅವಧಿಗೂ ಮೀರಿ ಮತದಾನ ಮುಂದುವರೆಸಿದ ಮತಗಟ್ಟೆಗಳ ಸಂಖ್ಯೆ (ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |
| 8 | ಮತಗಟ್ಟೆಗಳಿಗೆ ನೇಮಕ ಮಾಡಲಾದ ಒಟ್ಟು ಮೈಕ್ರೋ ಅಬ್ಸರ್‌ವರ್ ಸಂಖ್ಯೆ | |
| 9 | ಮತದಾನ ಪ್ರಾರಂಭವಾದ ನಂತರ ಇ.ವಿ.ಎಂ.ಗಳನ್ನು ಬದಲಾವಣೆ ಮಾಡಲಾದ ಸಂಖ್ಯೆ (ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸಬೇಕು) | |

| | | | | |
|---|---|---|---|---|
| 10 | ಮತಗಟ್ಟೆಗಳ ಹೆಸರು ಮತ್ತು ಸಂಖ್ಯೆಗಳೊಂದಿಗೆ ಬದಲಾವಣೆ ಮಾಡಿದ ಇವಿಎಂನಲ್ಲಿ ದಾಖಲಾದ ಒಟ್ಟು ಮತಗಳ ಸಂಖ್ಯೆ | | | |
| 11 | ಭದ್ರತಾ ಕೊಠಡಿಯನ್ನು ಸೀಲು ಮಾಡಿದ ಸಮಯ ಮತ್ತು ದಿನಾಂಕ | ಸಮಯ | ದಿನಾಂಕ | |
| 12 | ಎಲ್ಲಾ ಪ್ರಿಸೈಡಿಂಗ್ ಅಧಿಕಾರಿಗಳ ದಿನಚರಿ ಮತ್ತು ಇತರೆ ದಾಖಲೆಗಳನ್ನು ಪಡೆಯಲಾಗಿದೆಯೇ | ಹೌದು | ಇಲ್ಲ | |
| 13 | ಒಟ್ಟು ಮತದಾನ | ಒಟ್ಟು ಮತದಾರರ ಸಂಖ್ಯೆ | ಚಲಾಯಿಸಿದ ಮತಗಳ ಸಂಖ್ಯೆ | ಶೇಕಡಾವಾರು |
| | ಗಂಡು | | | |
| | ಹೆಣ್ಣು | | | |
| | ಒಟ್ಟು | | | |
| 14 | ಶೇಕಡಾ 90ಕ್ಕೂ ಹೆಚ್ಚು ಮತದಾನವಾದ ಮತಗಟ್ಟೆಗಳ ವಿವರ | ವಾರ್ಡ್ ಸಂಖ್ಯೆ | ಮತಗಟ್ಟೆ ಸಂಖ್ಯೆ | |
| | | | | |
| | | | | |
| | | | | |
| | | | | |
| | | | | |
| | | | | |

(ಕ್ರ.ಸಂ. 14ರ ಮತಗಟ್ಟೆಗಳ ಕುರಿತು ಮರು ಮತದಾನ ಅಗತ್ಯವಿದ್ದಲ್ಲಿ ನಿರ್ದಿಷ್ಟ ಅಭಿಪ್ರಾಯವನ್ನು ಆಯೋಗಕ್ಕೆ ವರದಿಮಾಡುವುದು)

ಕಾನೂನು ಮತ್ತು ಸುವ್ಯವಸ್ಥೆ, ನಕಲಿ ಮತದಾನ, ಅನಧಿಕೃತ ಪ್ರವೇಶ, ಮತದಾರರ ಪಟ್ಟಿ, ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳಿಗೆ ಸಂಬಂಧಿಸಿದ ಯಾವುದೇ ಘಟನೆಗಳ ವಿವರಗಳ ಪಟ್ಟಿ ಮಾಡತಕ್ಕದ್ದು.

ಮರು ಮತದಾನದ ಅವಶ್ಯಕತೆ ಇದೆಯೇ

ಹೌದಾದಲ್ಲಿ ವಿವರಗಳು/ ಕಾರಣಗಳು

ಮರು ಮತದಾನ ಉಂಟಾಗಲು ಕಾರಣರಾದ ಜವಾಬ್ದಾರಿ ಹೊರಿಸಬಹುದಾದವರ ವಿವರ

ದಿನಾಂಕ: ವೀಕ್ಷಕರ ಸಹಿ

ಸ್ಥಳ:

**ಅನುಬಂಧ–5**

ಚುನಾವಣಾ ವೀಕ್ಷಕರು ಮತ ಎಣಿಕೆ ಮುಗಿದ ನಂತರ 4ನೇ ವರದಿಯನ್ನು ಕಳುಹಿಸತಕ್ಕದ್ದು.

**ವೀಕ್ಷಕರ ವರದಿ–4**

| | |
|---|---|
| ವೀಕ್ಷಕರ ಸಂಕೇತ ಸಂಖ್ಯೆ ಮತ್ತು ಹೆಸರು | |
| ವಾರ್ಡಿನ ಸಂಖ್ಯೆ ಮತ್ತು ಹೆಸರು | |

| | | |
|---|---|---|
| 1 | ವಿತರಿಸಿದ ಅಂಚೆ ಮತಪತ್ರಗಳ ಸಂಖ್ಯೆ | |
| 2 | ಸ್ವೀಕರಿಸಿದ ಅಂಚೆ ಮತಪತ್ರಗಳ ಒಟ್ಟು ಸಂಖ್ಯೆ | |
| 3 | ಕ್ರಮಬದ್ಧವಾದ ಅಂಚೆ ಮತಪತ್ರಗಳು | |
| 4 | ಕ್ರಮಬದ್ಧವಲ್ಲದ ಅಂಚೆ ಮತ ಪತ್ರಗಳು | |

ಚಲಾಯಿಸಲಾದ ಮತಗಳು ಅಭ್ಯರ್ಥಿವಾರು ವರ್ಗೀಕರಣ

| ಕ್ರ.ಸಂ. | ಅಭ್ಯರ್ಥಿಗಳ ಹೆಸರು | ಚಲಾಯಿಸಿದ ಒಟ್ಟು ಮತಗಳ ಸಂಖ್ಯೆ | ಸಂಬಂಧಿಸಿದ ಪಕ್ಷ |
|---|---|---|---|
| | | | |

ಚುನಾವಣಾ ಫಲಿತಾಂಶ ಘೋಷಿಸಲಾಗಿದೆಯೇ ಹೌದು/ಇಲ್ಲ

**ನಿರ್ಗಮಿಸುವ ವರದಿ**

ವೀಕ್ಷಕರು ಚುನಾವಣಾ ಕರ್ತವ್ಯಕ್ಕೆ ವಾರ್ಡಿನಲ್ಲಿ ವರದಿ ಮಾಡಿಕೊಂಡ ದಿನಾಂಕ

ವೀಕ್ಷಕರು ನಿರ್ಗಮಿಸುವ ದಿನಾಂಕ

ವೀಕ್ಷಕರು ಚುನಾವಣಾ ಕರ್ತವ್ಯದ ಮಧ್ಯೆ ಯಾವುದಾದರೂ ಬಿಡುವು ತೆಗೆದುಕೊಂಡಿದ್ದರೆ

ಹೌದಾದಲ್ಲಿ ವಿವರ ನೀಡುವುದು

ಕರ್ತವ್ಯಕ್ಕೆ ತಡವಾಗಿ ವರದಿ ಮಾಡಲಾಗಿತ್ತೇ

ಹೌದಾದಲ್ಲಿ ಎಷ್ಟು ಸಮಯ

**ಅನುಬಂಧ–6**

**ಚುನಾವಣಾ ವೀಕ್ಷಕರು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಬಗ್ಗೆ**

**ಪೋಲೀಸರಿಂದ ಪಡೆಯಬೇಕಾದ ಮಾಹಿತಿ**

| | | |
|---|---|---|
| 1 | ವಾರ್ಡಿನ ಹೆಸರು ಮತ್ತು ಸಂಖ್ಯೆ | |
| 2 | ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾ ಚುನಾವಣಾಧಿಕಾರಿ, ಚುನಾವಣಾಧಿಕಾರಿ ಮತ್ತು ಪೋಲೀಸ್ ಅಧಿಕಾರಿಗಳ ಜಂಟಿ ಕ್ರಿಯಾ ಯೋಜನೆ | |
| 3 | ಕೈಗೊಳ್ಳಬಹುದಾದ ರಕ್ಷಣಾತ್ಮಕ ಕಾರ್ಯಗಳು | |
| 3.1 | ಕ್ರಿಮಿನಲ್ ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳ ಸಂಖ್ಯೆ ಮತ್ತು ದಾಖಲೆ ಪುಸ್ತಕ | |
| 3.2 | ಬಂಧಿಸಲ್ಪಟ್ಟಿರುವ ವ್ಯಕ್ತಿಗಳ ಸಂಖ್ಯೆ | |
| 3.3 | ಬಂಧಿಸಲ್ಪಟ್ಟಿರುವ ಹಾಗೂ ಮುಂದೆ ಉತ್ತಮ ನಡತೆ ಹೊಂದುತ್ತೇವೆಂದು ಕರಾರು ಪತ್ರ ಬರೆದು ಕೊಟ್ಟು ಬಿಡುಗಡೆಯಾದ ವ್ಯಕ್ತಿಗಳ ಸಂಖ್ಯೆ | |
| 3.4 | ಜಾಮೀನುರಹಿತ ವಾರಂಟ್ ನೀಡಿರುವ/ಜಾರಿ ಯಾಗಿರುವ/ ಪ್ರಕರಣಗಳು/ ಬಾಕಿ ಉಳಿದವುಗಳು/ಬಾಕಿ ಉಳಿಯುವುದಕ್ಕೆ ಕಾರಣಗಳು | |
| 3.5 | ಪರವಾನಗಿ ನೀಡಿರುವ ಶಸ್ತ್ರಾಸ್ತ್ರಗಳ ಸಂಖ್ಯೆ | |
| 3.6 | ಪರವಾನಗಿ ನೀಡಿರುವ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿರುವ ಸಂಖ್ಯೆ | |
| 3.7 | ವಶಪಡಿಸಿಕೊಂಡ ಅನಧಿಕೃತ ಶಸ್ತ್ರಾಸ್ತ್ರಗಳ ಸಂಖ್ಯೆ | |
| 3.8 | ಗುರುತಿಸಲ್ಪಟ್ಟ ಸಮಾಜ ವಿರೋಧಿ ವ್ಯಕ್ತಿಗಳ ಸಂಖ್ಯೆ | |
| 3.9 | ವಲ್ನರಬಲ್ ಪ್ರದೇಶಗಳೆಂದು ಗುರುತಿಸಿರುವ ಮತ್ತು ಅದಕ್ಕಾಗಿ ತೆಗೆದುಕೊಂಡಿರುವ ವಿಶೇಷ ಕ್ರಮಗಳು | |
| 4 | ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳು | |
| 5 | ಈ ಉದ್ದೇಶಕ್ಕಾಗಿ ನೇಮಿಸಲಾದ ಪ್ರಹಾರ ದಳದ ಸಂಖ್ಯೆ | |
| 6 | ಮತಗಟ್ಟೆ ಅಕ್ರಮಗಳನ್ನು ತಡೆಗಟ್ಟುವುದಕ್ಕಾಗಿ ಪ್ರತ್ಯೇಕ ಪ್ರಹಾರ ದಳವನ್ನು ನೇಮಕ ಮಾಡುವ ಕಾರ್ಯಕ್ರಮ. | |

| | | |
|---|---|---|
| **2. ಜಿಲ್ಲಾ ಚುನಾವಣಾಧಿಕಾರಿಗಳು/ಚುನಾವಣಾಧಿಕಾರಿಗಳಿಂದ ವೀಕ್ಷಕರು ಪಡೆದುಕೊಳ್ಳಬೇಕಾದ ಮಾಹಿತಿಗಳು** | | |
| 2.1 | ವಾರ್ಡಿನ ಹೆಸರು ಮತ್ತು ಸಂಖ್ಯೆ | |
| 2.2 | ಒಟ್ಟು ಮತಗಟ್ಟೆಗಳ ಸಂಖ್ಯೆ<br>ಅ)ಅತಿ ಸೂಕ್ಷ್ಮ –<br>ಆ)ಸೂಕ್ಷ್ಮ –<br>ಇ)ಸಾಮಾನ್ಯ – | |
| 2.5 | ಮತಗಟ್ಟೆಗಳ ಸಂಖ್ಯೆಯೊಂದಿಗೆ ವಲ್ನರಬಲ್ ಪ್ರದೇಶಗಳ ಪಟ್ಟಿ | |
| 2.6 | ಸ್ಥಳಾಂತರಿಸಬೇಕಾಗಬಹುದಾದ/ಮರು ಗುರ್ತಿಸಬೇಕಾದ ಮತಗಟ್ಟೆಗಳ ಪಟ್ಟಿ. | |
| 2.6 | ಮತದಾರರ ಅನುಕೂಲಕ್ಕಾಗಿ **ಮತದಾರರ ಸಹಾಯ ಕೇಂದ್ರ** ಗಳನ್ನು ಸ್ಥಾಪಿಸಿರುವ ವಿವರ | |
| 3. **ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ:–** | | |
| 3.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 3.2 | ಚುನಾವಣಾಧಿಕಾರಿಗಳ ಹೆಸರು, ವಿಳಾಸ ಮತ್ತು ದೂರವಾಣಿ ಸಂಪರ್ಕ ಸಂಖ್ಯೆಗಳು | |
| 3.3 | ಸಹಾಯಕ ಚುನಾವಣಾಧಿಕಾರಿಗಳ ಹೆಸರು, ವಿಳಾಸ ಮತ್ತು ದೂರವಾಣಿ ಸಂಪರ್ಕ ಸಂಖ್ಯೆಗಳು | |
| 3.4 | ಚುನಾವಣಾ ಆಯೋಗದ ಮಂಜೂರಾತಿ | |
| 3.5 | ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿಗಳ ಬದಲಾವಣೆ ಮಾಡಬೇಕಾಗಿದ್ದಲ್ಲಿ ಪ್ರಸ್ತಾವನೆ, ಕಾರಣಗಳೊಂದಿಗೆ | |
| **4. ಮತದಾನ ಸಾಮಗ್ರಿಗಳ ಪೂರೈಕೆ ಬಗ್ಗೆ** | | |
| 4.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 4.2 | ಮತಗಟ್ಟೆಗಳ ಸಂಖ್ಯೆ | |
| 4.3 | ಮತದಾನ ಸಾಮಗ್ರಿಗಳು ಮತ್ತು ನಮೂನೆಗಳ ಪೂರೈಕೆ | |
| 4.4 | ಮತದಾನ ಸಾಮಗ್ರಿಗಳು ಮತ್ತು ನಮೂನೆಗಳ ಸರಬರಾಜಿಗೆ ತೆಗೆದುಕೊಂಡಿರುವ ಕ್ರಮ | |
| 4.5 | ಮತಪತ್ರ ಮುದ್ರಣಕ್ಕಾಗಿ ತೆಗೆದುಕೊಂಡಿರುವ ಕ್ರಮ | |
| 4.6 | ಅಂಚೆ ಮತಪತ್ರ ಮುದ್ರಣಕ್ಕಾಗಿ ತೆಗೆದುಕೊಂಡಿರುವ ಕ್ರಮ | |
| **5. ವಿದ್ಯುನ್ಮಾನ ಮತಯಂತ್ರಗಳ ಲಭ್ಯತೆ:** | | |
| 5.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 5.2 | ಮತಗಟ್ಟೆಗಳ ಸಂಖ್ಯೆ | |
| 5.3 | ಅವಶ್ಯವಿರುವ ವಿದ್ಯುನ್ಮಾನ ಮತಯಂತ್ರಗಳು | |

| | | |
|---|---|---|
| 5.4 | ಲಭ್ಯವಿರುವ ವಿದ್ಯುನ್ಮಾನ ಮತಯಂತ್ರಗಳು | |
| 5.5 | ವಿದ್ಯುನ್ಮಾನ ಮತಯಂತ್ರಗಳು ಸುಸ್ಥಿತಿಯಲ್ಲಿವೆಯೇ ಎಂಬ ಬಗ್ಗೆ ಪರಿಶೀಲನೆ | |
| 5.6 | ದೋಷಪೂರಿತ ವಿದ್ಯುನ್ಮಾನ ಮತಯಂತ್ರಗಳನ್ನು ಪತ್ತೆ ಮಾಡಿ, ಬೇರೆಡೆ ಇಡುವುದು | |
| 5.7 | ವಿದ್ಯುನ್ಮಾನ ಮತಯಂತ್ರಗಳನ್ನು ಸಿದ್ಧಗೊಳಿಸುವ ಬಗ್ಗೆ ಭಾರತ ಚುನಾವಣಾ ಆಯೋಗದಿಂದ ಬಂದಿರುವ ನಿರ್ದೇಶನಗಳಂತೆ ವ್ಯವಸ್ಥೆ ಮಾಡಿಕೊಂಡಿರುವುದು | |
| 5.8 | ವಿದ್ಯುನ್ಮಾನ ಮತಯಂತ್ರಗಳ ರ್‍ಯಾಂಡಮೈಸೇಷನ್ | |
| 5.9 | ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ವಿದ್ಯುನ್ಮಾನ ಮತಯಂತ್ರಗಳನ್ನು ಸಿದ್ಧಪಡಿಸುವ ದಿನ, ಸ್ಥಳ ಮತ್ತು ವೇಳೆಯ ಬಗ್ಗೆ ಮಾಹಿತಿ ನೀಡುವುದು | |
| 5.10 | ವಿದ್ಯುನ್ಮಾನ ಮತಯಂತ್ರಗಳನ್ನು ಸಂಗ್ರಹಿಸಿಡಲು ಮಾಡಿಕೊಂಡಿರುವ ಸಿದ್ಧತೆ | |
| **6. ಮತಗಟ್ಟೆ ಸಿಬ್ಬಂದಿಗಳ ನೇಮಕಾತಿ:** | | |
| 6.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 6.2 | ಮತಗಟ್ಟೆಗಳ ಸಂಖ್ಯೆ | |
| 6.3 | ಮತಗಟ್ಟೆಗಳ ಸಿಬ್ಬಂದಿಗಳ ರಚನೆ (ಒಂದು ಮತಗಟ್ಟೆಗೆ) | |
| 6.4 | ನೇಮಕ ಮಾಡಬಹುದಾದ ಮತಗಟ್ಟೆಗಳ ಸಿಬ್ಬಂದಿಗಳ ಸಂಖ್ಯೆ | |
| 6.5 | ಮೀಸಲು ಮತಗಟ್ಟೆ ಸಿಬ್ಬಂದಿಗಳ ಸಂಖ್ಯೆ | |
| 6.6 | ಮತಗಟ್ಟೆ ಸಿಬ್ಬಂದಿಗಳ ರ್‍ಯಾಂಡಮೈಸೇಷನ್ | |
| **7. ಮತಗಟ್ಟೆ ಸಿಬ್ಬಂದಿಗಳ ತರಬೇತಿ:–** | | |
| 7.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 7.2 | ಮತಗಟ್ಟೆಗಳ ಸಂಖ್ಯೆ | |
| 7.3 | ಮತಗಟ್ಟೆ ಸಿಬ್ಬಂದಿಗಳ ತರಬೇತಿ ನೀಡಲು ಸಿದ್ಧತೆ | |
| 7.4 | ಅಂಚೆ ಮತ್ತು ಇ.ಡಿ.ಸಿ. ಮತದಾನಕ್ಕಾಗಿ ಅರ್ಜಿಯನ್ನು ಸಿದ್ಧಪಡಿಸುವುದು | |
| 7.5 | ಅಂಚೆ ಮತಪತ್ರಗಳನ್ನು ರವಾನಿಸುವುದಕ್ಕಾಗಿ ಮಾಡಿಕೊಳ್ಳುವ ಸಿದ್ಧತೆ | |
| 7.6 | ವಿದ್ಯುನ್ಮಾನ ಮತಯಂತ್ರಗಳ ಬಳಕೆ ಕುರಿತು ತರಬೇತಿ ಕಾರ್ಯಕ್ರಮ | |
| | | |
| | | |

| | | |
|---|---|---|
| **8. ವಲಯ ಅಧಿಕಾರಿಗಳು ಮತ್ತು ವೀಕ್ಷಕರ ನೇಮಕ:–** | | |
| 8.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 8.2 | ವಲಯ ಅಧಿಕಾರಿಗಳ ಅಧಿಕಾರ ವ್ಯಾಪ್ತಿ ಮತ್ತು ದೂರವಾಣಿ ಸಂಪರ್ಕ ಸಂಖ್ಯೆಗಳು | |
| 8.3 | ಮೈಕ್ರೋ ಅಬ್ಸರ್ವರ್ಸ್ ಪಟ್ಟಿ ಮತ್ತು ಅವರಿಗೆ ಹಂಚಿಕೆ ಮಾಡಲಾಗಿರುವ ಮತಗಟ್ಟೆಗಳ ಸಂಖ್ಯೆ | |
| 8.4 | ವಲಯ ಅಧಿಕಾರಿಗಳ ಮತ್ತು ಮೈಕ್ರೋ ಅಬ್ಸರ್ವರ್‌ಗಳ ತರಬೇತಿ | |
| **9. ಚುನಾವಣಾ ಕಾರ್ಯಕ್ಕಾಗಿ ಅವಶ್ಯಕವಿರುವ ವಾಹನಗಳ ಸಂಖ್ಯೆ:–** | | |
| 9.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 9.2 | ಮತಗಟ್ಟೆಗಳ ಸಂಖ್ಯೆ | |
| 9.3 | ಅವಶ್ಯಕವಿರುವ ವಾಹನಗಳ ಸಂಖ್ಯೆ | ಮತಗಟ್ಟೆ ಸಿಬ್ಬಂದಿಗಳಿಗಾಗಿ<br><br>ವಲಯ ಅಧಿಕಾರಿಗಳಿಗಾಗಿ<br><br>ಮೈಕ್ರೊ ಅಬ್ಸರ್ವರ್ಸ್‌ಗಳಿಗಾಗಿ |
| **10. ಮಾದರಿ ನೀತಿ ಸಂಹಿತೆ:–** | | |
| 10.1 | ವೀಕ್ಷಕರ ಒಪ್ಪಿಗೆಯ ಮೇರೆಗೆ ಮಾದರಿ ನೀತಿ ಸಂಹಿತೆಯ ಬಗ್ಗೆ ಅಭ್ಯರ್ಥಿಗಳ ಸಭೆ | |
| 10.2 | ಮಾದರಿ ನೀತಿ ಸಂಹಿತೆಯ ಜಾರಿ ಬಗ್ಗೆ ನಿಗಾ ವಹಿಸುವುದು | |
| 10.3 | ಸರ್ಕಾರಿ ವಾಹನಗಳ ದುರ್ಬಳಕೆ ಪ್ರಕರಣಗಳು | |
| 10.4 | ಸರ್ಕಾರಿ ಕಟ್ಟಡಗಳ ದುರ್ಬಳಕೆ ಪ್ರಕರಣಗಳು | |
| 10.5 | ಸರ್ಕಾರಿ ನೌಕರರ ದುರ್ಬಳಕೆ ಪ್ರಕರಣಗಳು | |
| 10.6 | ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿರುವ ಪ್ರಕರಣಗಳ ಬಗ್ಗೆ ಪ್ರತಿ ದಿನ ನಿಗಾ ಇಡುವುದು | |
| 10.7 | ಎಲ್ಲ ಪ್ರಮುಖ ಸಭೆಗಳ ಮತ್ತು ಭಾಷಣಗಳ ವೀಡಿಯೋ ಚಿತ್ರೀಕರಣ ನಡೆಸಲು ಸಿದ್ದತೆ ಮಾಡಿಕೊಳ್ಳುವುದು. | |
| 10.8 | ನೀತಿ ಸಂಹಿತೆ ಉಲ್ಲಂಘನೆಯಾದ 24 ಗಂಟೆಗಳ ಒಳಗೆ ಕ್ರಮ ತೆಗೆದುಕೊಂಡಿರುವ ಬಗ್ಗೆ ವರದಿ. | |
| 10.9 | ಸಂಚಾರಿ ಕಾನೂನು, ಅಬಕಾರಿ ಕಾನೂನು, ಮೋಟಾರು ವಾಹನ ಸಂಚಾರ ಕ್ರಮಗೊಳಿಸುವುದು ಇತ್ಯಾದಿ ಗಳನ್ನು ಜಾರಿಗೊಳಿಸುವ ಬಗ್ಗೆ ಪೋಲೀಸ್ ಅಧಿಕಾರಿಗಳೊಂದಿಗೆ ಸಭೆ | |

| | | |
|---|---|---|
| 10.10 | ಸಾರ್ವಜನಿಕ ಆಸ್ತಿಗಳನ್ನು ವಿರೂಪಗೊಳಿಸದಿರುವ ಬಗ್ಗೆ ಸ್ಥಳೀಯ ಸಂಸ್ಥೆಗಳೊಂದಿಗೆ ಸಭೆ | |
| 10.11 | ಸಭೆಗಳನ್ನು ನಡೆಸಲು ಅನುಮತಿ ನೀಡುವ ಬಗ್ಗೆ ಸಿದ್ಧತೆಗಳು | |
| 10.12 | ಚುನಾವಣಾ ಪ್ರಚಾರಕ್ಕಾಗಿ ಹಾಗೂ ಮತದಾನದ ದಿನದಂದು ಅಭ್ಯರ್ಥಿಗಳು ವಾಹನಗಳನ್ನು ಬಳಸಲು ಅನುಮತಿ ನೀಡುವ ಬಗ್ಗೆ ಸಿದ್ಧತೆಗಳು | |
| **11. ಚುನಾವಣಾ ಸಿದ್ಧತೆಗಳ ಗಣಕೀಕರಣ:–** | | |
| 11.1 | ಜಿಲ್ಲಾ ಮಟ್ಟದ ತಾಂತ್ರಿಕ ಪಡೆಯನ್ನು ರಚಿಸುವ ಬಗ್ಗೆ ಜಿಲ್ಲಾ ಮತ್ತು ಕ್ಷೇತ್ರವಾರು ಸಿದ್ಧತೆ | |
| 11.2 | ಇದಕ್ಕಾಗಿ ನಿಯೋಜಿಸಲ್ಪಡುವ ಅಧಿಕಾರಿ/ಸಿಬ್ಬಂದಿಗಳು | |
| 11.3 | ಮೂಲ ಮಾಹಿತಿಗಳ ಗಣಕೀಕರಣಕ್ಕಾಗಿ ಸಿದ್ಧತೆ | |
| 11.4 | ಆಯೋಗದ ವೆಬ್‌ಸೈಟ್‌ಗೆ ಮಾಹಿತಿಗಳನ್ನು ಅಪ್ ಲೋಡ್ ಮಾಡುವುದು | |
| 11.5 | ಮತದಾನ ಮತ್ತು ಮತ ಎಣಿಕೆ ವರದಿಗಳನ್ನು ಆನ್ ಲೈನ್ ಪ್ರಸಾರ ಮಾಡುವ ಬಗ್ಗೆ ಸಿದ್ಧತೆ | |
| **12. ಮತಗಟ್ಟೆ ಸಿಬ್ಬಂದಿ ಮತ್ತು ಸಾಮಗ್ರಿಗಳನ್ನು ರವಾನಿಸಲು ಸೂಕ್ತ ಸ್ಥಳ ಗುರುತಿಸುವ ಬಗ್ಗೆ.** | | |
| 12.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 12.2 | ಮತಗಟ್ಟೆ ಸಿಬ್ಬಂದಿ ಮತ್ತು ಸಾಮಗ್ರಿಗಳನ್ನಿಡಲು ಸೂಕ್ತ ಕಟ್ಟಡ ಮತ್ತು ವಿಳಾಸವನ್ನು ಗುರುತಿಸುವ ಬಗ್ಗೆ. | |
| 12.3 | ಸದರಿ ಸ್ಥಳಕ್ಕೆ ದೂರವಾಣಿ ಸಂಪರ್ಕ ಕಲ್ಪಿಸುವ ಬಗ್ಗೆ. | |
| 12.4 | ಮತದಾನದ ನಂತರ ಚುನಾವಣಾ ಸಾಮಗ್ರಿಗಳನ್ನು ಹಿಂಪಡೆಯುವ ಬಗ್ಗೆ | |
| 12.5 | ಮತದಾನದ ನಂತರ ಚುನಾವಣಾ ಸಾಮಗ್ರಿಗಳು ಮತ್ತು ವಿದ್ಯುನ್ಮಾನ ಮತಯಂತ್ರಗಳನ್ನು ಭದ್ರತಾ ಕೊಠಡಿಯಲ್ಲಿ ಇಡುವ ಬಗ್ಗೆ | |
| 12.6 | ಚುನಾವಣಾ ಸಿಬ್ಬಂದಿಗಳು ಮತ್ತು ಸಾಮಗ್ರಿಗಳ ಸಾಗಾಣಿಕೆಗೆ ಬೆಂಗಾವಲನ್ನು ನಿಯೋಜಿಸುವ ಬಗ್ಗೆ. | |
| **13. ಮತ ಎಣಿಕೆ ಸಿದ್ಧತೆಗಳು:–** | | |
| 13.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 13.2 | ಮತ ಎಣಿಕೆ ನಡೆಯುವ ಕಟ್ಟಡದ ಹೆಸರು ಮತ್ತು ವಿಳಾಸ | |
| 13.3 | ಚೆಕ್ ಲಿಸ್ಟ್‌ನಂತೆ ಎಲ್ಲ ಅಗತ್ಯಗಳು ಇವೆಯೇ | |
| 13.4 | ಆಯೋಗದಿಂದ ಒಪ್ಪಿಗೆ ಪಡೆಯಲಾಗಿದೆಯೇ? ಪಡೆದಿದ್ದಲ್ಲಿ ಆದೇಶದ ಪ್ರತಿ ಲಗತ್ತಿಸಿ. | |

| | | |
|---|---|---|
| 13.5 | ಚುನಾವಣಾ ನಂತರ ವಿದ್ಯುನ್ಮಾನ ಮತಯಂತ್ರಗಳ ಮತ್ತು ಮತ ಎಣಿಕಾ ಕೇಂದ್ರಗಳ ಬಳಿ ರಕ್ಷಣೆಗಾಗಿ ಕಾವಲುಪಡೆ ನಿಯೋಜಿಸುವುದು | |
| 13.6 | ಕಂಟ್ರೋಲ್ ರೂಂ ಸ್ಥಾಪಿಸುವುದು. | |
| 13.7 | ಮಾಧ್ಯಮದವರಿಗಾಗಿ ಒಂದು ಕೊಠಡಿಯನ್ನು ಇಡುವುದು. | |
| 13.8 | ಮತ ಎಣಿಕೆ ನಂತರ ಫಲಿತಾಂಶಗಳ ಕ್ರೋಢೀಕರಣ ಮತ್ತು ಅದನ್ನು ಬಿತ್ತರಗೊಳಿಸುವುದು | |
| 13.9 | ಮತ ಎಣಿಕೆ ಸಾಮಗ್ರಿಗಳನ್ನು ಸಂಗ್ರಹಿಸುವುದು | |
| **14. ಮತ ಎಣಿಕೆ ಸಿಬ್ಬಂದಿ ನೇಮಕಾತಿ ಮತ್ತು ತರಬೇತಿ:-** | | |
| 14.1 | ವಾರ್ಡ್‌ಗಳ ಹೆಸರು ಮತ್ತು ಸಂಖ್ಯೆ | |
| 14.2 | ನೀಡಲಾಗಿರುವ ಎಣಿಕೆ ಟೇಬಲ್‌ಗಳ ಸಂಖ್ಯೆ | |
| 14.3 | ಎಣಿಕೆ ಸಿಬ್ಬಂದಿಗಳ ಸಂಯೋಜನೆ | |
| 14.4 | ಮತ ಎಣಿಕೆ ಸಿಬ್ಬಂದಿಗಳ ನೇಮಕಾತಿ | |
| 14.5 | ಮತ ಎಣಿಕೆ ಸಿಬ್ಬಂದಿಗಳ ತರಬೇತಿ | |
| 14.6 | ಮತ ಎಣಿಕೆ ಸಿಬ್ಬಂದಿಗಳ ರ್‍ಯಾಂಡಮೈಸೇಷನ್ | |
| **15. ಮಾಹಿತಿ/ವರದಿಗಳನ್ನು ಕ್ರೋಢೀಕರಿಸುವ ಬಗ್ಗೆ:-** | | |
| 15.1 | ಮೈಕ್ರೊ ಅಬ್ಸರ್ವರ್ಸ್ | |
| 15.2 | ವಲಯ ಅಧಿಕಾರಿಗಳು | |
| 15.3 | ಪ್ರಿಸೈಡಿಂಗ್ ಅಧಿಕಾರಿಗಳು | |
| **16. ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದ ಕ್ರಮಗಳು:-** | | |
| 16.1 | ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ಅಭ್ಯರ್ಥಿಗಳಿಗೆ ತಿಳುವಳಿಕೆ ನೀಡುವುದು | |
| 16.2 | ಎರಡು ಸ್ಥಳೀಯ ಪತ್ರಿಕೆಗಳಲ್ಲಿ ಅಭ್ಯರ್ಥಿಗಳ ಸರ್ಕಾರಿ ಬಾಕಿ ಬಗ್ಗೆ ಪ್ರಚುರಪಡಿಸುವುದು | |
| 16.3 | ಅಭ್ಯರ್ಥಿಗಳ ಚುನಾವಣಾ ಲೆಕ್ಕ ಪತ್ರಗಳ ಪರಿಶೀಲನೆಗಾಗಿ ಒಬ್ಬ ನಿಗದಿತ ಅಧಿಕಾರಿಯನ್ನು ನೇಮಿಸಿರುವ ಪಟ್ಟಿ. | |
| 16.4 | ಅಭ್ಯರ್ಥಿಗಳ ಚುನಾವಣಾ ಲೆಕ್ಕ ಪತ್ರಗಳನ್ನು ಪ್ರಚುರಪಡಿಸುವುದು | |
| 16.5 | ಜಿಲ್ಲಾ ಚುನಾವಣಾಧಿಕಾರಿಗಳು ಅಭ್ಯರ್ಥಿಗಳು ಚುನಾವಣಾ ಪ್ರಚಾರಕ್ಕಾಗಿ ಸಾಮಾನ್ಯವಾಗಿ ಬಳಸುವ ಸಾಮಗ್ರಿಗಳ ಬೆಲೆ ನಿಗದಿಪಡಿಸುವುದು | |

**ಅನುಬಂಧ–7**

**ನೋಡಲ್ ಆಫೀಸರ್ಸ್ ಚೆಕ್‌ಲಿಸ್ಟ್**

**ವಾರ್ಡ್ ಸಂಖ್ಯೆ ಮತ್ತು ಹೆಸರು:**

| | | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ನಾಮಪತ್ರ ಸಲ್ಲಿಸಿದ ದಿನಾಂಕ | |
| 3 | ನಾಮಪತ್ರ ಸಲ್ಲಿಕೆ ಸಮಯದಲ್ಲಿ ಬಳಸಿದ ವಾಹನಗಳ ಸಂಖ್ಯೆ | |
| 4 | ನಾಮಪತ್ರ ಸಲ್ಲಿಸಿದ ಸಂದರ್ಭದಲ್ಲಿ ಅಭ್ಯರ್ಥಿಯೊಂದಿಗೆ ಹಾಜರಿದ್ದವರ ಸಂಖ್ಯೆ(ಚುನಾವಣಾ ಏಜೆಂಟ್ ಮತ್ತು ಅಭ್ಯರ್ಥಿ ಸೇರಿದಂತೆ) | |
| 5 | ನಾಮಪತ್ರ ಸಲ್ಲಿಕೆಯ ವಿಡಿಯೋ ಚಿತ್ರೀಕರಣ ಮಾಡಲಾಗಿದೆಯೇ: | |
| 6 | ದೈನಂದಿನ ವೆಚ್ಚ ಕುರಿತು ಲೆಕ್ಕ ಪತ್ರ/ವೋಚರ್ ಸಲ್ಲಿಸಿದ್ದಾರೆಯೇ? | |
| 7 | ವೆಚ್ಚ ವಿವರಗಳಿಗೆ ಅಭ್ಯರ್ಥಿ/ಅವರ ಚುನಾವಣಾ ಏಜೆಂಟ್‌ರವರು ಸಹಿ ಮಾಡಿದ್ದಾರೆಯೇ? | |
| 8 | ದೈನಂದಿನ ವೆಚ್ಚಗಳ ವಹಿಯನ್ನು ನಿರ್ವಹಿಸಿದ್ದಾರೆಯೇ? | |
| 9 | ಲೆಕ್ಕ ಪತ್ರ ಸಲ್ಲಿಸಿರುವ ದಿನಾಂಕ | |
| 10 | ಪ್ರತಿ ಎರಡು ದಿನಕ್ಕೊಮ್ಮೆ ಲೆಕ್ಕ ಪತ್ರ ವಿವರ ಸಲ್ಲಿಸುತ್ತಿದ್ದಾರೆಯೇ? | |
| 11 | ವೆಚ್ಚದ ವಿವರವನ್ನು ಹಾಗೂ ವೆಚ್ಚದ ವಹಿಯನ್ನು ಹಾಜರುಪಡಿಸಿದ ನಂತರ ಪರಿಶೀಲನೆ ನಡೆಸಿದ ಬಗ್ಗೆ ನೋಡಲ್ ಅಧಿಕಾರಿಯು ಸಂಬಂಧಿಸಿದ ವಹಿಯಲ್ಲಿ ಸಹಿ ಮಾಡಿದ್ದಾರೆಯೇ? | |
| 12 | ವೆಚ್ಚ ವಿವರದ ವೋಚರ್‌ಗಳನ್ನು ಸಲ್ಲಿಸದೆ ಇದ್ದ ಸಂದರ್ಭದಲ್ಲಿ ರಿಟರ್ನಿಂಗ್ ಅಧಿಕಾರಿ ಅಥವಾ ನೋಡಲ್ ಅಧಿಕಾರಿ ಏನು ಕ್ರಮ ವಹಿಸಿದ್ದಾರೆ? | |
| 13 | ನ್ಯೂನತೆಗಳ ಬಗ್ಗೆ ವೀಕ್ಷಕರು/ರಿಟರ್ನಿಂಗ್ ಅಧಿಕಾರಿಗೆ ವರದಿ ಮಾಡಲಾಗಿದೆಯೇ? | |
| 14 | ವೀಕ್ಷಕರು ನೋಡಲ್ ಅಧಿಕಾರಿಗೆ ನೀಡಿದ ಸೂಚನೆಗಳನ್ನು ಪಾಲಿಸಲಾಗಿದೆಯೇ? | |
| 15 | ಅಭ್ಯರ್ಥಿಯು ಲೆಕ್ಕ ಪತ್ರದಲ್ಲಿ ನಮೂದಿಸಿದ ವೆಚ್ಚಗಳು ಸರ್ಕಾರ/ಬಿಬಿಎಂಪಿ ನಿಗದಿಪಡಿಸಿದ ದರಗಳಂತಿದೆಯೇ? | |
| 16 | ಲೆಕ್ಕಪತ್ರಗಳಲ್ಲಿ ಗಮನಿಸಿದ ಯಾವುದೇ ನ್ಯೂನತೆಗಳನ್ನು ಅಭ್ಯರ್ಥಿಯ ಗಮನಕ್ಕೆ ಲಿಖಿತವಾಗಿ ಆಗಿಂದಾಗಲೇ ತರಲಾಗಿದೆಯೇ, ಮತ್ತು ಈ ಬಗ್ಗೆ ಅಭ್ಯರ್ಥಿಯ ಸ್ವೀಕೃತಿ ಪಡೆಯಲಾಗಿದೆಯೇ? | |
| 17 | ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೋಡಲ್ ಅಧಿಕಾರಿಗಳ ಸಾಮಾನ್ಯ ಅಭಿಪ್ರಾಯ | |

ದಿನಾಂಕ: ನೋಡಲ್ ಅಧಿಕಾರಿಯ ಸಹಿ ಮತ್ತು ಪದನಾಮ

## ಅನುಬಂಧ–8

## Extract of Karnataka Municipal Corporation Act, 1976

**(39-A) " State Election Commission'' Means the State Election Commission constituted Under Section 308 of Karnataka Panchayat Raj Act 1993.**

**26-A. Account of election expenses and maximum there of.-**

(1) Every candidate at an election under this Act shall either by himself or by his election agent keep a separate and correct account of all expenditure in connection with the election incurred or authorized by him or by his election agent between the date on which he has been nominated and the date of declaration of the result thereof, both dates inclusive.

(2) Any expenditure incurred or authorized in connection with the election of the candidate under this Act by a political party or by any other association or his election agent) shall not be deemed to be the expenditure in connection with the election incurred or authorized by the candidate or by his election agent for the purpose of sub-section (1)

**Explanation** 1- For the purpose of this sub-section "Political Party'' shall have the same meaning as in the election Symbols (Reservation and Allotment) Order, 1968 for the time being in force.

**Explanation 2 -** For the removal of doubts, it is hereby declared that any expenditure incurred in respect of any arrangement made, facilities provided or any other act or thing done by any person in the service of the Government or the service of the Corporation in the discharge of purported discharge of his official duty for, or to, or in relation to, any candidate or his election agent or any other person acting with the consent of the candidate or his election agent(whether by reason of the office held by the candidate or for any other reason) shall not be deemed to be expenditure in connection with the election incurred or authorised by a candidate or by his election agent for the purpose of this section.

(3) The account shall contain such particulars as may be prescribed

(4) The total of the said expenditure shall not exceed such amount as may be prescribed.

**26-B**. **Lodging of account with the Returning Officer**.- Every contesting candidate at the election under this Act shall, within thirty days from the date of election of the returned candidate or, if there are more than one returned candidate at the election and the dates of the election are different, the later of those two dates lodge with the Returning Officer appointed at an election under this Act, an account of his election expenses which shall be a true copy of the account kept by him or by his election agent under Section 26-A.

**26-C. Failure to lodge an account of election expenses.- If the State Election Commission is satisfied that any person.-**

(a) Has failed to lodge an account of election expenses within the time and in the manner required by or under this Act, and

(b) Has no good reason or justification for the failure,

The State Election Commission shall by order published in the official Gazette declare him to be disqualified and any such person shall be disqualified for a period of three years from the date of the order.

**The Karnataka Municipal Corporations (Elections) (Amendment) Rules, 2009**

**NOTIFICATION**

**NO.UDD 163 MLR 2009, Bangalore, dated: 3rd October, 2009**

**RULES**

1. **Title and Commencement:** (1) These rules may be called the Karnataka Municipal Corporations (Elections) (Amendment) Rules, 2009.
2. **Insertion of new rules 22B, 22C, 22D, and 22E:** In the Karnataka Municipal Corporations (Election)Rules, 1979 (hereinafter referred to as the said rules) after rule 22A the following new rules shall be inserted, namely:-
3. **22B Particulars of account of election expenses under section 26A:-** (1) The candidate or his election agent shall maintain the account of election expenses under section 26A shall be in Form 11A, which shall ordinarily contain the following particulars in respect of each item of expenditure from day to day, namely;-

(a) Date on which the expenditure was incurred or authorised

(b) The nature of expenditure (as for example, travelling, postage or printing and the like);

(c) The amount of the expenditure with break up of;

(i) The amount paid

(ii) The amount outstanding: and

(iii) Date of payment

(d) The name and address of the payee:

(e) The serial number of vouchers, in case of amount paid;

(f) The serial number of bills if any, in case of amount outstanding;

(g) The name and address of the person to whom the amount outstanding is payable.

(2) A voucher shall be obtained for every item of expenditure unless from the nature of the case, such as postage, travel by rail and the like, it is not practicable to obtain a voucher.

(3) All vouchers shall be lodged along with the account of election expenses, arranged according to the date of payment and serially numbered by the candidate or his election agent and such serial numbers shall be entered in the account under item(e) of sub rule(1).

(4) It shall not be necessary to give particulars mentioned in item (e) of sub-rule (1) in regard to items of expenditure for which vouchers have not been obtained under sub-rule(2).

(5) Every Candidate shall make a declaration in Form 11B, while lodging his Statement of expenditure before the Returning Officer and the Returning officer shall acknowledge the same in From 11 C.

**22 C. Notice by Returning Officers:** The Returning officer, shall within two days from the date on which the account of elections has been lodged by a candidate under section 26-B of the Act, cause

(a) The date on which the account has been lodged.

(b) The name of candidate: and

(c) The time and place at which such account can be inspected.

**22 D. Report by the returning officer as to the lodging of the account of election expenses and the decision of the State Election Commission thereon-** (1) As soon as may be after the expiration of the time specified in section 26-B of the Act for lodging of the accounts of election expenses at any election, the returning officer shall report to the Election Commission.

(a) The name of each contesting candidate

(b) Whether such candidate has lodged his account of election expenses and if so, the date on which such account has been lodged; and

(c) Whether in his opinion such account has been lodged within the time and in the manner required by the Act and these rules.

(2) Where the Returning officer is of the opinion, that the account of election expenses of any candidate has not been lodged in the manner required by the Act under these rules, he shall with every such report forward to the State Election Commission the account of election expenses of that candidate and the vouchers lodged along with it.

(3) Immediately after the submission of the report referred to sub-rule (2), the Returning officer shall publish a copy thereof by affixing the same on the notice board.

(4) As soon as may be after the receipt of the report referred to in sub-rule(2), the State Election Commission shall consider the same and decide whether any contesting candidate has failed to lodge the account of election expenses within the time and in the manner required by the Act and these rules.

(5) Where the State Election Commission decides that a contesting candidate has failed to lodge his account of expenses within the time and in the manner required by the Act under these rules, it shall by notice in writing call upon the candidate to show cause why he should not be disqualified under section 26 C of the Act for such failure.

(6) Any contesting candidate who has been called upon to show cause under sub-rule(5) may within twenty days of the receipt of such notice submit in respect of the matter, a representation in writing to the State Election Commission, and shall at the same time send to the Returning Officer a copy of his representation together with a complete account of his election expenses if he had not already furnished such an account.

(7) The Returning Officer shall, within five days of the receipt thereof, forward to the State Election Commission a copy of the representation and the account (if any) with such comments as he deems fit, to make thereon.

**22 E. Maximum limit of election expenses under section 26A:** (1) The maximum limit of the expenditure that may be incurred by each candidate or his election agent, in connection with the election, shall not exceed.

(a) In respect of Bruhat Bangaloare Mahanagara Palike rupees five lakhs; and

(b) In respect of other City Corporation other than the Bruhat Bangalore Mahanagara Palike rupees three lakhs.

3. **Insertion of new Forms 11 A, 11 B and 11c:-** In the said rules after Form 11, the following new Forms shall be inserted, namely:-

**Form 11 A**

**[See rule 22B(1)]**

**PART-1**

| | | |
|---|---|---|
| 1 | Name of the Candidate and address | |
| 2 | Ward Number and Name of the Ward | |
| 3 | Name of Corporation | |
| 4 | Details of Election | General/Bye Election |
